# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 • ಸಂಚಿಕೆ:166 • ನೋಂದಣಿ ನಂ.:KARKAN27911 • ವಿಜಯನಗರ • 25.11.2023 • ಶನಿವಾರ • ಪುಟ:04 • ಬೆಲೆ:2
Volume:01 • Issue:166 • Reg.No:KARKAN27911 • VIJAYANAGARA • 25.11.2023 • Saturday • Page:04 • Rs:2





## ಮೈಕ್ರೋ ನ್ಯೂಸ್


Place Your CHANGE OF NAME, HOUSE RENT / SALE / LEASE, Notice Advertisement. & EVENT COVERAGE
Contact
9448633038
Near Valmiki Circle, HOSAPETE-583201
Email:hampitimes@gmail.com


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

# ಮೇವು ಪೂರೈಕೆಯಲ್ಲಿ ನಿರ್ಲಕ್ಷ್ಯ ಸಲ್ಲದು

## ಬರ ಪರಿಸ್ಥಿತಿ ನಿರ್ವಹಣೆ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್‌ಸಿಂಗ್ ಸೂಚನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯಲ್ಲಿ ಜಾನುವಾರುಗಳಿಗೆ ಯಾವುದೇ ರೀತಿಯ ಮೇವಿನ ಕೊರತೆಯಾಗದಂತೆ ಮುಂಜಾಗ್ರತೆ ವಹಿಸಲು ವಸತಿ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬರ ಪರಿಸ್ಥಿತಿ ನಿರ್ವಹಣೆ ಮತ್ತು ಜಿಲ್ಲೆಯ ಪ್ರಗತಿ ಕುರಿತು ಶುಕ್ರವಾರ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಮೇವು ಬ್ಯಾಂಕ್:**

ಜಾನುವಾರುಗಳು ರೈತರ ಬೆನ್ನೆಲಬಾಗಿದ್ದು, ಅವುಗಳನ್ನು ಕೃಷಿಕರು ಪ್ರಮುಖ ಆಧಾರವಾಗಿಟ್ಟುಕೊಂಡು ಹಾಗೂ ಆದಾಯದ ಮೂಲವಾಗಿಯೂಸಾಕಾಣಿಕೆ ಮಾಡಿಕೊಂಡಿದ್ದಾರೆ. ಮಳೆ ಕೊರತೆಯಿಂದಾಗಿ ಪ್ರಸ್ತುತ ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಎದುರಾಗಿದ್ದರಿಂದ ಜಿಲ್ಲೆಯ ಜಾನುವಾರುಗಳಿಗೆ ಮೇವಿನ ಕೊರತೆಯಾಗದಿರಲಿ. ಈ ಹಿನ್ನೆಲೆಯಲ್ಲಿ ಸಮರ್ಪಕ ಮೇವು ಪೂರೈಕೆಗೆ



ಕೃಷಿ, ಪಶು ಇಲಾಖೆ ಹಾಗೂ ತಹಶೀಲ್ದಾರರು ಸೇರಿ ತಾಲ್ಲೂಕುವಾರು ಜಂಟಿಸರ್ವೇ ಕೈಗೊಂಡು ಜಿಲ್ಲೆಯ ರೈತರಲ್ಲಿರುವ ಮೇವಿನ ಲಭ್ಯತೆ, ಅವಶ್ಯಕತೆ ಹಾಗೂ ಉಳಿಕೆ ಮೇವಿನ ವಿವರದ ಮಾಹಿತಿ ಪಡೆದು ರೈತರ ಪಟ್ಟಿ ತಯಾರಿಸಬೇಕು. ರೈತರ ಬೇಡಿಕೆಗನುಸಾರ ಮೇವು ಪೂರೈಕೆಗೆ ಹಾಗೂ ಮೇವು ಬ್ಯಾಂಕ್ ಸ್ಥಾಪನೆಗೂ ತ್ವರಿತ ಕ್ರಮ ಕೈಗೊಳ್ಳಬೇಕು. ಇಲಾಖೆಗೆ ರೈತರಿಂದಲೂ ಮೇವು ಖರೀದಿಸಲು ಅವಕಾಶವಿದ್ದು, ಈ ಕುರಿತು ರೈತರಿಗೆ ಜಾಗೃತಿ ಮೂಡಿಸುವುದರ ಜೊತೆಗೆ ಕಟಾವಿನ ನಂತರ ಉಳಿಯುವ ಮೇವವನ್ನು ಸುಡದಂತೆ ರೈತರಿಗೆ ಅರಿವು ಮೂಡಿಸಬೇಕು ಎಂದು ಪಶು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿ ಹರಪನಹಳ್ಳಿ ಮತ್ತು ಕೂಡ್ಲಿಗಿಯಲ್ಲಿ ಮೇವು ಬ್ಯಾಂಕ್ ಸ್ಥಾಪನೆ ಮಾಡಿ ಮೇವು ಸಂಗ್ರಹಿಸಲು ಸೂಚನೆ ನೀಡಿದರು.

ಪಶು ಇಲಾಖೆ ಉಪನಿರ್ದೇಶಕ ಡಾ. ಬಸವರಾಜ ಅವರು ಮಾತನಾಡಿ, ಜಿಲ್ಲೆಯಲ್ಲಿ 2.28 ಲಕ್ಷ ದನಗಳು, 93 ಸಾವಿರ ಎಮ್ಮೆಗಳು ಹಾಗೂ 8.13 ಲಕ್ಷ ಕುರಿ ಮೇಕೆಗಳಿವೆ. ಜಿಲ್ಲೆಯ ತಾಲ್ಲೂಕಿಗೆ ಒಂದರಂತೆ ಗೋಶಾಲೆಗಳನ್ನು ಪ್ರಾರಂಭಿಸಲು ಹಾಗೂ ಹೋಬಳಿಗೆ ಒಂದರಂತೆ ಮೇವು ಬ್ಯಾಂಕ್ ಸ್ಥಾಪನೆಗೆ ಕ್ರಮ ಯೋಜನೆ ರೂಪಿಸಲಾಗಿದೆ. ಒಂದು ವಾರಕ್ಕೆ 17,110 ಟನ್ ಮೇವು ಅವಶ್ಯಕವಿದ್ದು, 29 ವಾರಗಳಿಗೆ ಅವಶ್ಯವಿರುವ ಮೇವನ್ನು ಜಿಲ್ಲೆಯಲ್ಲಿ ಲಭ್ಯವಿದೆ. ರೈತರಿಂದ ಮೇವು ಖರೀದಿಸಲು ಟೆಂಡರ್ ಕರೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಮುದಗಲ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಜನವರಿ 1 ರಿಂದ ನವಂಬರ್ 23 ರವರೆಗೆ ವಾಡಿಕೆ ಮಳೆ 631 ಮಿ.ಮೀ ಇದ್ದು, 336 ಮಿ.ಮೀ ವಾಸ್ತವಿಕ ಮಳೆಯಾಗಿ, ಮಳೆ-47% ಕೊರತೆ-ಯಾಗಿದೆ ಎಂದರು.

ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಕ್ರಮ ಕೈಗೊಳ್ಳಿ :ಪ್ರಸ್ತುತ ಬರ ಹಿನ್ನೆಲೆಯಲ್ಲಿ >>3



# ಶ್ರೀ ಓಂಕಾರೇಶ್ವರ ದೇವಸ್ಥಾನದ 73ನೇ ವಾರ್ಷಿಕೋತ್ಸವ



**ಹಂಪಿ ಟೈಮ್ಸ್ ಹೊಸಪೇಟೆ:**

ನಗರದ ಬಂಬೂ ಬಜಾರ್ ಬಳಿ ಇರುವ ಶ್ರೀ ಓಂಕಾರೇಶ್ವರ, ಶ್ರೀ ಬನ್ನಿಮಹಾಂಕಾಳೇಶ್ವರಿ, ಶ್ರೀ ಮಲ್ಲೇಶ್ವರಿ, ಶ್ರೀ ಚೌಡೇಶ್ವರ ಅಮ್ಮನವರ 73ನೇ ವಾರ್ಷಿಕೋತ್ಸವ ನ.25 ರಂದು ಜರುಗಲಿದೆ. ನ.24 ರಂದು ರಾತ್ರಿ ಭಜನೆ, ನ.25ರ ಬೆಳಿಗ್ಗೆ 4ಕ್ಕೆ ಶ್ರೀ ಓಂಕಾರೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಬೆಳಿಗ್ಗೆ 8 ಗಂಟೆಯಿಂದ 11.30ರವರೆಗೆ ನಗರದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯವೃಂದಗಲೊಂದಿಗೆ ಹಾಗೂ ಬಿರುದಾವಳಿಂದೊಡಗೂಡಿ ಶ್ರೀ ಓಂಕಾರೇಶ್ವರ ಸ್ವಾಮಿಯ ಹಾಗೂ ಕೇತೇಶ್ವರ ಸ್ವಾಮಿಯ ವೈಭವದ ಮೆರವಣಿಗೆ ನಡೆಯಲಿದೆ. 11.30ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿತರಣೆ ಮಾಡಲಾಗುವುದು ಎಂದು ಶ್ರೀ ಶರಣ ಮೇದಾರ ಕೇತಯ್ಯನವರ ಭಕ್ತಮಂಡಳಿ ತಿಳಿಸಿದೆ.

# ಉನ್ನತ ಹುದ್ದೆಗೆ ಬೇಕಾದ ಶಿಕ್ಷಣ ಗಳಿಸಿ

## ದೇವಾಂಗಮಠದ ಶಂಕ್ರಯ್ಯಸ್ವಾಮಿ ಹೇಳಿಕೆ । ದೇವಾಂಗ ಮಹರ್ಷಿ ಜಯಂತ್ಯುತ್ಸವ

■ **ಹಂಪಿ ಟೈಮ್ಸ್ ಕಂಪ್ಲಿ**

ದೇವಾಂಗ ಸಮುದಾಯದವರು ಸರ್ವಾಂಗೀಣ ಅಭಿವೃದ್ಧಿ ಸಾಧಿಸಲು ಉನ್ನತ ಶಿಕ್ಷಣಗಳಿಸಿ ಉನ್ನತ ಹುದ್ದೆ ಪಡೆದುಕೊಳ್ಳುವಲ್ಲಿ ಜಾಗೃತರಾಗಬೇಕು ಎಂದು ಹೊಸಪೇಟೆ ದೇವಾಂಗಮಠದ ಶಂಕ್ರಯ್ಯಸ್ವಾಮಿ ಹೇಳಿದರು.

ತಾಲೂಕಿನ ನಂ.10ಮುದ್ದಾಪುರ ಗ್ರಾಮದಲ್ಲಿ ಶುಕ್ರವಾರ ಮುದ್ದಾಪುರ ದೇವಾಂಗ ಸಮಾಜ ಹಮ್ಮಿಕೊಂಡಿದ್ದ, ದೇವಾಂಗ ಮಹರ್ಷಿ ಜಯಂತ್ಯುತ್ಸವದ ದಿವ್ಯಸಾನ್ನಿಧ್ಯವಹಿಸಿ ಮಾತನಾಡಿ, ದೇವಾಂಗ ಸಮುದಾಯದವರ ಮೂಲ ಕಸುಬು ನೇಕಾರಿಕೆ ಆಗಿದ್ದು ಆಧುನಿಕತೆಗೆ ತಕ್ಕಂತೆ ಉದ್ಯೋಗದಲ್ಲಿ ನಾವೀನ್ಯತೆ ಹೊಂದಬೇಕು. ದೇವಾಂಗ ಸಮುದಾಯದ ಸಂಸ್ಕಾರಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಮಕ್ಕಳಿಗೆ ಬಾಲ್ಯದಲ್ಲಿಯೇ ದೇವಾಂಗ ಸಮುದಾಯದವರ ಆಚಾರ, ವಿಚಾರ, ಸಂಸ್ಕಾರಗಳನ್ನು ಕಲಿಸುವಲ್ಲಿ ಪೋಷಕರು ಜಾಗೃತಿ ತೋರಬೇಕು ಎಂದರು.

ನಂ.10ಮುದ್ದಾಪುರ ಗ್ರಾಮದ ಗ್ರಾಪಂ.ಕಚೇರಿ ಬಳಿಯಿಂದ ದೇವಾಂಗಮಹರ್ಷಿ ಭಾವಚಿತ್ರ ಮೆರವಣಿಗೆ ಸಡಗರ ಸಂಭ್ರಮಗಳಿಂದ ಜರುಗಿತು.



ಮೆರವಣಿಗೆಯಲ್ಲಿ ಕಳಸಧಾರತಿ, ಮಂಗಳವಾದ್ಯಗಳು ಪಾಲ್ಗೊಂಡಿದ್ದವು. ಚೌಡೇಶ್ವರಿ ದೇವಸ್ಥಾನದಲ್ಲಿ ರಾಮಲಿಂಗ, ಚೌಡೇಶ್ವರಿ ಅಮ್ಮನವರಿಗೆ ಅಭಿಷೇಕ, ವಸ್ತ್ರದಾನ, ಅನ್ನಸಂತರ್ಪಣೆ ಕಾರ್ಯಕ್ರಮಗಳು ಜರುಗಿದವು.

ಅರ್ಚಕ ಮಂಜುನಾಥ, ದೇವಾಂಗ ಸಮಾಜದ ಅಧ್ಯಕ್ಷ ಕೊಂಡಮಿ ಕುಮಾರಸ್ವಾಮಿ, ಪ್ರಮುಖರಾದ ಬುದ್ದಿ ಶ್ರೀನಿವಾಸಪ್ಪ, ವಠಾರ ವಿರೋಬಣ್ಣ, ಗಂಜಿ ಮಂಜುನಾಥ, ಮರೆಪ್ಪ, ಕನಪ ಬಸವರಾಜ, ಬಿ.ಗಂಗಾಧರ, ರಾಮಣ್ಣ, ಶಿವಲಲಿಂಗಪ್ಪ, ನಾಗರಾಜ, ಪ್ರಭಾಕರ ಸೇರಿ ಸಮಾಜದವರಿದ್ದರು.

ಕಂಪ್ಲಿ: ಪಟ್ಟಣದ ಬಣ್ಣದಚೌಡೇಶ್ವರಿ ದೇವಸ್ಥಾನದಲ್ಲಿ ದೇವಾಂಗ ಮಹರ್ಷಿ ಜಯಂತ್ಯುತ್ಸವ ಜರುಗಿತು. ಕಂಪ್ಲಿ ದೇವಾಂಗ ಸಮಾಜದ ಅಧ್ಯಕ್ಷ ಸಪ್ಪರದ ರಾಘವೇಂದ್ರ ಮಾತನಾಡಿ, ರಾಜ್ಯದಲ್ಲಿ ದೇವಾಂಗ ಸಮುದಾಯದವರು ನಾನಾ ಕ್ಷೇತ್ರಗಳಲ್ಲಿ ಹಿಂದುಳಿದ್ದು, ಪ್ರಗತಿಗಾಗಿ ರಾಜ್ಯ ಸರ್ಕಾರ ದೇವಾಂಗ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ದೇವಲ ಮಹರ್ಷಿ ಜಯಂತ್ಯುತ್ಸವವನ್ನು ಸರ್ಕಾರವೇ ಆಚರಿಸಬೇಕು. ಈ ಬೇಡಿಕೆಗಳ ಈಡೇರಿಕೆಗೆ ದೇವಾಂಗ ಸಮುದಾಯದವರು ಸಂಘಟಿತರಾಗಬೇಕು ಎಂದರು. ದೇವಾಂಗಮಠದ ಸಾವಿತ್ರಮ್ಮ ತ್ರಿಪುರಾಂತಸ್ವಾಮಿ, ಅರ್ಚಕ ಮಿಟ್ಟಿ ಶಂಕರ್, ಸಮಾಜದ ಪ್ರಮುಖರಾದ ಜಿ.ಪಂಪಣ್ಣ, ಜಿ.ವಿರುಪಾಕ್ಷಿ, ಎಸ್.ಸುಬ್ಬಣ್ಣ, ಪಿ.ನಾರಾಯಣಪ್ಪ, ಎಚ್.ಚಂದ್ರಶೇಖರ್ ಸೇರಿ ಗದ್ದೆಚೌಡೇಶ್ವರಿದೇವಿ ಸೇವಾ ಸಮಿತಿ, ಬನಶಂಕರಿ ದೇವಾಂಗ ಮಹಿಳಾ ಸಂಘದವರು ಇತರರಿದ್ದರು.

# ಮಿಶ್ರತಳಿ ಹಸು ಖರೀದಿಗೆ ಸಹಾಯಧನ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2023-24ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಉತ್ತೇಜಿಸಲು ವಿಶೇಷ ಘಟಕ,, ಗಿರಿಜನ ಉಪಯೋಜನೆಯಡಿ ಉಳಿಕೆ ಅನುದಾನದಲ್ಲಿ ಒಂದು ಮಿಶ್ರತಳಿ ಹಸು ಘಟಕ ಅನುಷ್ಠಾನಗೊಳಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಒಂದು ಮಿಶ್ರ ತಳಿ ಹಸು ಘಟಕದಲ್ಲಿ ಒಂದು ಮಿಶ್ರತಳಿ ಹಸು ಖರೀದಿಸಲು ರೂ.65000/- ಇದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರೂ.58500/- ಸಹಾಯಧನ ಒದಗಿಸಲಾಗುವುದು, ಶೇ.10 ಫಲಾನುಭವಿಗಳ ವಂತಿಕೆ ಅಥವಾ ಸಾಲದೊಂದಿಗೆ ಅನುಷ್ಠಾನಗೊಳಿಸಲಾಗುವುದು. ಡಿ.05 ರೊಳಗೆ ಅರ್ಜಿ ಸಲ್ಲಿಸಬಹುದು. **ಅರ್ಹತೆಗಳು:** ಪಶು ಸಂಗೋಪನೆಯಲ್ಲಿ ತೊಡಗಿಸಿಕೊಂಡ ಮತ್ತು ಆಸಕ್ತ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರನ್ನು ಆಯ್ಕೆ ಮಾಡಲಾಗುವುದು, ಅರ್ಜಿದಾರರು ಫ್ರೂಟ್ಸ್ ಐಡಿ(ಗುರುತಿನ ಸಂಖ್ಯೆ) ಹೊಂದಿರಬೇಕು, ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕುಗಳ ಮುಖ್ಯ ಪಶು ವೈದ್ಯಾಧಿಕಾರಿಗಳು(ಆಡಳಿತ) ಮುಖ್ಯ ಪಶುವೈದ್ಯಾಧಿಕಾರಿಗಳು ಮತ್ತು ಪಶು ಆಸ್ಪತ್ರೆ ಹೊಸಪೇಟೆ ಎಚ್.ಬಿ.ಹಳ್ಳಿ, ಹೂವಿನಹಡಗಲಿ, ಕೂಡ್ಲಿಗಿ, ಕೊಟ್ಟೂರು, ಹರಪನಹಳ್ಳಿ ಕಚೇರಿಗಳಿಗೆ ಭೇಟಿ ನೀಡಬಹುದಾಗಿದೆ ಎಂದು ಇಲಾಖೆಯ ಉಪನಿರ್ದೇಶಕ ಡಾ.ಎಂ.ಸಿ.ವಿನೋದ್ ಕುಮಾರ್ ತಿಳಿಸಿದ್ದಾರೆ.

# ಕಾಂತರಾಜ್ ವರದಿ ಸ್ವೀಕಾರಕ್ಕೆ ಆಗ್ರಹ

## ಹೋರಾಟ ಸಮಿತಿ ಸಂಚಾಲಕ ಮರಡಿ ಜಂಬಯ್ಯನಾಯಕ ಹೇಳಿಕೆ । ರಾಜಕೀಯ ಲಾಭಕ್ಕಾಗಿ ಬಲಾಢ್ಯ ಸಮುದಾಯಗಳ ವಿರೋಧ




■ **ಹಂಪಿ ಟೈಮ್ಸ್ ಹೊಸಪೇಟೆ**

ಹಿಂದುಳಿದ ವರ್ಗಗಳ ಆಯೋಗದ ಅಡಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿದ ಹೆಚ್.ಕಾಂತರಾಜ್ ನೇತೃತ್ವದ ವರದಿಯನ್ನು ರಾಜ್ಯ ಸರ್ಕಾರ ತಕ್ಷಣ ಸ್ವೀಕರಿಸಬೇಕು ಮತ್ತು ವಿಧಾನಸಭೆ ಅಧಿವೇಶನದಲ್ಲಿ ಮತ್ತು ಸಾರ್ವಜನಿಕ ಚರ್ಚೆಗೆ ಒಳಪಡಿಸಬೇಕೆಂದು ಒತ್ತಾಯಿಸಿ ಹೆಚ್.ಕಾಂತರಾಜ್ ವರದಿ ಜಾರಿಗಾಗಿ ಹೋರಾಟ ಸಮಿತಿ ಪದಾಧಿಕಾರಿಗಳು ಶುಕ್ರವಾರ ಜಿಲ್ಲಾಧಿಕಾರಿಗಳು ಕಚೇರಿ ಎದುರು ಆಗ್ರಹಿಸಿ ಮನವಿ ಸಲ್ಲಿಸಿದರು.

ಜಿಲ್ಲಾ ಸಂಚಾಲಕ ಮರಡಿ ಜಂಬಯ್ಯನಾಯಕ ಮಾತನಾಡಿ, 2015ರಲ್ಲಿ ಸಮೀಕ್ಷೆ ಆರಂಭಗೊಂಡಿರುವುದು ಒಂದು ಚಾರಿತ್ರಿಕ ಘಟನೆ. ಭಾರತದಲ್ಲಿ ಮೊಟ್ಟ ಮೊದಲು ಜಾತಿವಾರು ಜನಗಣತಿ 1872ರಲ್ಲಿ ನಡೆದಿದೆ. ಆ ಮೇಲೆ 1881 ರಿಂದ 1931ರ ವರೆಗೆ ಹತ್ತು ವರ್ಷಗಳಿಗೊಮ್ಮೆ ನಡೆದು ಆ ನಂತರ ಮುಂದುವರಿಸಿಲ್ಲ. ಸಮೀಕ್ಷೆ ಮುಂದುವರಿಯದಂತೆ ತಡೆ ಒಡ್ಡಿದ್ದು, ಇದೊಂದು ಚಾರಿತ್ರಿಕ ಅಪರಾಧವಾಗಿದೆ. 83 ವರ್ಷಗಳ ನಂತರ ಮುಂದುವರಿಸದೆ 2014ರಲ್ಲಿ ತಮ್ಮ ನೇತೃತ್ವದ ಸರ್ಕಾರ ಹಿಂದುಳಿದ ವರ್ಗಗಳ ಆಯೋಗದ ಮುಖಾಂತರ ಮತ್ತೆ ಚಾಲನೆ ನೀಡಿದ್ದು, ಇದೀಗ ಸಮೀಕ್ಷ ಪೂರ್ಣಗೊಂಡಿದೆ. ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ಸಮಯದಲ್ಲಿ ಕೆಲವು ಬಲಾಢ್ಯ ಸಮುದಾಯಗಳು ವಿರೋಧ ವ್ಯಕ್ತಪಡಿಸುತ್ತಿವೆ. ಹೆಚ್.ಕಾಂತರಾಜ್ ವರದಿಯಲ್ಲಿ ಏನಿದೆ ಎಂಬುದೇ ರಾಜ್ಯದ ಜನತೆಗೆ ಗೊತ್ತಿಲ್ಲದಿರುವಾಗ ತಮ್ಮ ರಾಜಕೀಯ ಲಾಭಕ್ಕಾಗಿ ವಿರೋಧ ವ್ಯಕ್ತಪಡಿಸುವುದು ಸರಿಯಲ್ಲ ಎಂಬುದು ನಮ್ಮಗಳ ಅಭಿಪ್ರಾಯ. ರಾಜ್ಯ ಸರ್ಕಾರ ಇಂತಹ ಬಲಾಢ್ಯ ಸಮುದಾಯಗಳ ಹಿತಾಸಕ್ತಿಗೆ ಬಲಿಯಾಗದೆ. ರಾಜ್ಯದ ಸರ್ವಜನರ ಅಭಿವೃದ್ಧಿಗಾಗಿ ತನ್ನ ಬದ್ಧತೆಯನ್ನ ವ್ಯಕ್ತಪಡಿಸಬೇಕೆಂದು ಒತ್ತಾಯಿಸಿದರು.

ಮುಖಂಡರಾದ ಸೋಮಶೇಖರ ಬಣ್ಣದಮನೆ, ಸಿದ್ದಲಿಂಗಪ್ಪ, ಬಿಸಾಟಿ ತಾಯಪ್ಪನಾಯಕ, ಎಲ್.ಮಂಜುನಾಥ, ಗಂಟೆ ಸೋಮಶೇಖರ, ರಮೇಶಕುಮಾರ್, ರವಿಕುಮಾರ್ ಸೇರಿದಂತೆ ಇತರರು ಇದ್ದರು.

# ವಿದ್ಯಾರ್ಥಿಗಳಿಂದ ದಿಢೀರ್ ಪ್ರತಿಭಟನೆ



■ **ಹಂಪಿ ಟೈಮ್ಸ್ ಹೊಸಪೇಟೆ:**

ನಗರದ ಶ್ರೀ ಶಂಕರ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ತರಗತಿಗಳು ಸರಿಯಾಗಿ ನಡೆ-ಯದೇ ಇರುವ ಕಾರಣ ಮತ್ತು ತಮ್ಮ ಇತರ ಬೇಡಿಕೆಗಳಿಗಾಗಿ ದಿಢೀರ್ ಪ್ರತಿಭಟನೆಯನ್ನು ಹಮ್ಮಿಕೊಂಡರು.

ಸರ್ಕಾರಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರ ಪ್ರತಿಭಟನೆ ನಡೆಯುತ್ತಿರುವುದರಿಂದ ತಮ್ಮ ತರಗತಿಗಳಿಗೆ ತುಂಬಾ ತೊಂದರೆಯಾಗಿದೆ ಮತ್ತು ಕಾಯಂ ಅಧ್ಯಾಪಕರು ಇದ್ದರೂ ಸಹ ತರಗತಿಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು, ಇದರ ಜೊತೆಗೆ ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯವು ಪದವಿ ವಿದ್ಯಾರ್ಥಿಗಳಿಗೆ ಬೇಕಾಬಿಟ್ಟಿಯಾಗಿ ಶುಲ್ಕವನ್ನು ಏರಿಸಿರುವುದರಿಂದ ಗ್ರಾಮೀಣ ಭಾಗದ ಮತ್ತು ಬಡತನದಲ್ಲಿ ಇರುವಂತಹ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿದೆ, ಕಾರ್ಮಿಕರ ರೈತರ ಸಾವಿರಾರು ಮಕ್ಕಳು ಸರ್ಕಾರಿ ಪದವಿ ಕಾಲೇಜುಗಳಿಗೆ ಸೇರಿಕೊಂಡರೆ ಇಲ್ಲಿ ಇತರೆ ಕಾಲೇಜು ಖಾಸಗಿ ಕಾಲೇಜುಗಳಲ್ಲಿರುವಂತೆ ಅತಿಯಾದ ಶುಲ್ಕವನ್ನು ಭರಿಸಲು ಸಾಧ್ಯವಾಗದ ವಿದ್ಯಾರ್ಥಿಗಳು ತಮ್ಮ ಅಳಲನ್ನು ಮಾನ್ಯ ಶಾಸಕರ ಪುತ್ರರಾದ ಶ್ರೀ ಗುರುದತ್ ಅವರ ಬಳಿ ಹೇಳಿಕೊಂಡರು

ಮಾನ್ಯ ಶ್ರೀ ಗುರುದತ್ ರವರು ಮಾತನಾಡಿ ಸರ್ಕಾರಕ್ಕೆ ಮತ್ತು ವಿಶ್ವವಿದ್ಯಾಲಯದಲ್ಲಿ ಮಾತನಾಡಿ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸುತ್ತೇನೆ ಎಂದು ಭರವಸೆ ಕೊಟ್ಟರು.

ಈ ಸಂದರ್ಭದಲ್ಲಿ ನೂರಾರು ವಿದ್ಯಾರ್ಥಿಗಳು ವಿವಿಧ ವಿದ್ಯಾರ್ಥಿ ಸಂಘಟನೆಯ ಮುಖಂಡರು ಪಾಲ್ಗೊಂಡಿದ್ದರು.

## ಅರ್ಹರಿಗೆ ಸರ್ಕಾರದ ಸೌಲಭ್ಯ ತಲುಪಿಸಿ: ನವೀನ್‌ರಾಜ್ ಸಿಂಗ್

ಹಂಪಿ ಟೈಮ್ಸ್ ಹೊಸಪೇಟೆ
ಅರ್ಹ ಫಲಾನುಭವಿಗಳಿಗೆ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯತಲುಪಿಸಲು ಎಲ್ಲಾ ಅಧಿಕಾರಿಗಳು ಶ್ರಮಿಸಬೇಕುಎಂದು ವಿಜಯನಗರಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಆಗಿರುವ ವಸತಿ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ವಿಜಯನಗರಜಿಲ್ಲಾಉಸ್ತುವಾರಿ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್ ಅವರುತಿಳಿಸಿದರು.

ವಿವಿಧ ಇಲಾಖೆಗಳ ಪ್ರಗತಿಕುರಿತು ಶುಕ್ರವಾರ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನಸಾಮಾನ್ಯರಿಗಾಗಿಜಾರಿಯಲ್ಲಿರುವ ಸರ್ಕಾರದ ವಿವಿಧ ಯೋಜನೆಗಳು ಅರ್ಹರಿಗೆತಲುಪಿಸುವ ಜವಾಬ್ದಾರಿ ಇಲಾಖೆಗಳದ್ದು. ಇಲಾಖೆಗಳ ಮೂಲಕ ಸಾರ್ವಜನಿಕರಿಗೆ ನೀಡಲಾಗುವವಿವಿಧಸೇವೆಗಳು, ಯೋಜನೆ ಮತ್ತುಇತರೆ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾಗೊಳ್ಳುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು. ಜಿಲ್ಲೆಯಎಲ್ಲಾ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗಬೇಕು. ಪ್ರಸಕ್ತ ನೀರಾವರಿ ಹಾಗೂ ತೋಟಗಾರಿಕೆ ಬೆಳೆಗಳಿಗೆ ಅವಶ್ಯವಿರುವರಸಗೊಬ್ಬರಗಳನ್ನು ರೈತರ ಬೇಡಿಕೆಯಂತೆ ಪೂರೈಸಬೇಕು. ಬೆಳೆಗಳಲ್ಲಿ ಕಂಡುಬರುವ ರೋಗಗಳ ನಿಯಂತ್ರಣ, ಹತೋಟಿ ಕ್ರಮಗಳ ಕುರಿತುರೈತರಿಗೆ ಸೂಕ್ತ ಜಾಗೃತಿ ಮೂಡಿಸಬೇಕುಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಅನ್ನಭಾಗ್ಯಯೋಜನೆ:** ಅನ್ನಭಾಗ್ಯಯೋಜನೆಯಡಿಜಿಲ್ಲೆಯಲ್ಲಿಕಳೆದಮೂರುತಿಂಗಳಿನಿಂದ30ಸಾವಿರಫಲಾನುಭವಿಗಳು ಮಾಸಿಕ ಆಹಾರ ಸಾಮಾಗ್ರಿಗಳನ್ನು ಪಡೆಯುತ್ತಿಲ್ಲ. ಇದರಿಂದಯೋಜನೆ ಹೆಚ್ಚುವರಿಅಕ್ಕಿಯರೂ.170 ಮೊತ್ತವು ಸಹಜಮಾವಾಗುವುದಿಲ್ಲ.ಅಂತ್ಯೋದಯಅನ್ನಯೋಜನೆಪ್ರತಿಕಾರ್ಡ್‌ದಾರರಿಗೆ 35 ಕೆಜಿ ಅಕ್ಕಿ ನೀಡಲಾಗುತ್ತಿದೆ. ಈ ಕಾರ್ಡ್‌ನಲ್ಲಿ3ಅಥವಾಅದಕ್ಕಿಂತಕಡಿಮೆಜನರುಇದ್ದರೂ ಸಹಅಂತಹಅಂತ್ಯೋದಯಕಾರ್ಡ್‌ದಾರರಿಗೆಹೆಚ್ಚುವರಿ 5ಕೆಜಿಅಕ್ಕಿಯಹಣಬರುವುದಿಲ್ಲಎಂದುಆಹಾರ ಇಲಾಖೆ ಉಪನಿರ್ದೇಶಕರು ಮಾಹಿತಿ ನೀಡಿದರು.

ಇದೆ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಅನ್ನಭಾಗ್ಯ ಯೋಜನೆಯಡಿ ಫಲಾನುಭವಿಗಳು ಮಾಸಿಕ ಆಹಾರ ಸಾಮಾಗ್ರಿ ಪಡೆಯದೇ ಇರುವುದಕ್ಕೆ ಸ್ಪಷ್ಟ ಮಾಹಿತಿ ನೀಡಬೇಕು. ರೇಷನ್ ಪಡೆಯದೇ ಇರುವ ಜಿಲ್ಲೆಯ ಫಲಾನುಭವಿಗಳ ವಿವರವನ್ನು ಆಯಾ ನ್ಯಾಯಬೆಲೆ ಅಂಗಡಿಗಳವಾರು ತಯಾರಿಸಿ ಸಲ್ಲಿಸಬೇಕು. **ವಸತಿಯೋಜನೆಯಡಿ:** ಜಿಲ್ಲೆಯಲ್ಲಿ ಅನುಷ್ಠಾನವಾಗುತ್ತಿರುವ ಪಿಎಂಎವೈ,ಬಸವ, ಡಾ. ಬಿ.ಆರ್. ಅಂಬೇಡ್ಕರ್,ದೇವರಾಜಅರಸ (ಅಲೇಮಾರಿ) ವಸತಿ ಯೋಜನೆಗಳಡಿ ಬಾಕಿ ಇರುವಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಅರ್ಹ ಫಲಾನುಭವಿಗಳಿಗೆ ಶೀಘ್ರದಲ್ಲಿ ವಸತಿ ಸೌಲಭ್ಯಕಲ್ಪಿಸಬೇಕು. ಆಶ್ರಯಯೋಜನೆಯಡಿಈಗಾಗಲೇ ಕೆಲವುಗ್ರಾಮ ಪಂಚಾಯತ್‌ಗಳಿಗೆ ಜಮೀನು ಮಂಜೂರು ಮಾಡಲಾಗಿದ್ದು, ಗ್ರಾಮ ಸಭೆ ಮೂಲಕ ಅರ್ಹ ಫಲಾನುಭವಿಗಳ ಆಯ್ಕೆಗೆಕ್ರಮ ಕೈಗೊಳ್ಳಬೇಕುಎಂದುಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಂಗನವಾಡಿ, ಶಾಲಾ, ಕಾಲೇಜು, ಆಸ್ಪತ್ರೆ ಹಾಗೂ ಇತರ ಇಲಾಖೆಗಳಿಗೆ ಸಂಬಂಧಿಸಿದಂತೆನಿವೇಶನ ಮಂಜೂರು ಹಾಗೂ ಇದಕ್ಕೆಯಾವುದೇಸಮಸ್ಯೆಗಳಿದ್ದಲ್ಲಿಕೂಡಲೇ ಗಮನಕ್ಕೆ ತಂದು ಪರಿಪಡಿಸಿಕೊಳ್ಳಬೇಕುಎಂದರು.

ಸಭೆಯಲ್ಲಿಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕಅಧಿಕಾರಿ ಸದಾಶಿವ ಪ್ರಭು ಬಿ.ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ನಿರೀಕ್ಷೆಗೂ ಮೀರಿ ಯಶ ಕಂಡ ಶಿಕ್ಷಕಿ

## ಪರಿಣಾಮಕಾರಿ ಬರಹಗಳು ಮಕ್ಕಳಲ್ಲಿ ಪರಿವರ್ತನೆಗೆ ಸಹಕಾರಿ । ಶಿಸ್ತು, ಶಿಕ್ಷೆಗಳ ಕುರಿತು ಸ್ಪಷ್ಟ ಕಲ್ಪನೆ ಹೊಂದಿದ್ದರೆ ಸಾಧನೆ ಸುಲಭ

ಅದೊಂದು ಗ್ರಾಮಾಂತರದ ಸರಕಾರಿ ಶಾಲೆ. ವನಿತಾ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿರುವ ಶಿಕ್ಷಕಿ. ಮಕ್ಕಳ ಕಲಿಕೆಗಳಿಗೆ ಹೊಸತನ್ನು ರೂಪಿಸುವ ಅಮಿತೋತ್ಸಾಹ. ಮಕ್ಕಳಿಗೂ ಈ ಶಿಕ್ಷಕಿ ಎಂದರೆ ಅಚ್ಚು ಮೆಚ್ಚು. ಆಕೆಯೂ ಮಕ್ಕಳನ್ನು ತುಂಬಾ ಪ್ರೀತಿಸುತ್ತಾ, ಸಲುಗೆ ಬೆಳಸಿಕೊಂಡಿದ್ದಳು. ಶಿಸ್ತು, ಶಿಕ್ಷೆಗಳ ಕುರಿತು ಸ್ಪಷ್ಟ ಕಲ್ಪನೆ ಹೊಂದಿದ್ದರಿಂದ ಆಕೆಯ ತರಗತಿಯಲ್ಲಿ ಅವಕ್ಕೆ ಜಾಗವಿರಲಿಲ್ಲ. ಇದರಿಂದಾಗಿ ಕೆಲವು ಸಾರಿ ವನಿತಾ ಅವರು ತೊಂದರೆಗೆ ಒಳಗಾಗಿದ್ದುಂಟು. ಮಕ್ಕಳಿಗೆ ಅವರು ನೀಡಿದ್ದ ಸ್ವಾತಂತ್ರವು ಬೊಧನೆಯ ಸಮಯದಲ್ಲಿ ಕಿರಿ ಕಿರಿ ಮಾಡುತ್ತಿತ್ತು. ಅದಕ್ಕೆ ಅವರೇ ಕೆಲವು ನಿಯಮಗಳನ್ನು ರೂಪಿಸಿ ಶಿಸ್ತು ತರಲು ಯೋಚಿಸಿದರು. ಅದೇಕೊ ಮನಸ್ಸು ಒಪ್ಪಲಿಲ್ಲ. ಅದರ ಬಗ್ಗೆ ಕೆಲವು ಕಾಲ ಚಿಂತಿಸಿ ಅಂತಿಮವಾಗಿ ಒಂದು ಹೊಸತನದ ನಿರ್ಧಾರ ಮಾಡಿದರು. ಮಕ್ಕಳೇ ಸ್ವಯಂ ಶಿಸ್ತನ್ನು ರೂಪಿಸಿಕೊಳ್ಳಬೇಕು. ಅದಕ್ಕೆ ಪೂರಕವಾಗಿ ಬೇಕಾದ ಎಲ್ಲಾ ನಿಯಮಗಳನ್ನು ರೂಪಿಸುವುದು, ಜಾರಿಗೆ ತರುವುದು ಮತ್ತು ಸಂರಕ್ಷಿಸುವುದು ಅವರಿಂದಲೇ ಆಗಬೇಕು. ಇದನ್ನು ಪ್ರಾಯೋಗಿಕವಾಗಿ ತರಗತಿಯಲ್ಲಿ ಜಾರಿಗೆ ತಂದರು. ಅದರಿಂದ ನಿರೀಕ್ಷೆಗೂ ಮೀರಿ ಯಶ ಕಂಡುಕೊಂಡರು.

ಸಾಮಾನ್ಯವಾಗಿ ಎಲ್ಲಾ ಶಾಲೆಗಳಲ್ಲಿ ಶಿಕ್ಷಕರು ನಿಯಮಗಳನ್ನು ರೂಪಿಸುತ್ತಾರೆ. ಅವು ಮಕ್ಕಳಿಗೆ ಇಷ್ಟವಿರಲಿ – ಬಿಡಲಿ ಅವರು ಪಾಲಿಸಲೇಬೇಕು. ನಿಯಮಗಳನ್ನು ಮೀರಿದಲ್ಲಿ ಶಿಕ್ಷಕರ ಉಗ್ರ ಅವತಾರದಿಂದ ಮಕ್ಕಳು ಹೆದರಿದ ಸಾಕಷ್ಟು ಉದಾಹರಣೆಗಳಿವೆ. ಅಂತಹವರು ಮಕ್ಕಳ ಕಣ್ಣಿಗೆ ಪೋಲೀಸಿನವರ ಹಾಗೆ ಕಾಣುತ್ತಾರೆ. ಈ ರೀತಿ ಸನ್ನಿವೇಶಗಳಿಂದ ಮಕ್ಕಳ ಸೃಜನಶೀಲತೆ ಕಮರಿಹೋಗುತ್ತದೆ ಎಂದು ಅನೇಕ ಶಿಕ್ಷಣ ತಜ್ಞರು ಮತ್ತು ಮನಶಾಸ್ತ್ರಜ್ಞರು ಒತ್ತಿ ಒತ್ತಿ ಹೇಳಿದ್ದಾರೆ. ಆದರೂ ನಾವು ಹೊಸತನದ ಕಡೆಗೆ ಗಮನಹರಿಸುತ್ತಿಲ್ಲ. ಇದಕ್ಕೆ ಒಂದು ಸರಳ ಉಪಾಯವೇ ಮಕ್ಕಳೆ ನಿಯಮಗಳನ್ನು ರೂಪಿಸಿಕೊಳ್ಳುವುದು.

ತರಗತಿಗಳ ಯಶಸ್ಸು ಮಕ್ಕಳ ಪಾಲ್ಗೊಳ್ಳುವಿಕೆಯ ಮಟ್ಟದ ಮೇಲೆ ಅವಲಂಬಿತವಾಗಿರುತ್ತವೆ. ಪ್ರತಿ ಕ್ಷಣದಲ್ಲಿಯೂ ಚಟುವಟಿಕೆಯಾತ್ಮಕ ಬೋಧನೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವ ಶಿಕ್ಷಕ ನಿರೀಕ್ಷಿತ ಗುರಿ ತಲುಪುತ್ತಾನೆ. ತರಗತಿಯು ಅತ್ಯಂತ ಶಿಸ್ತಿನಿಂದ ನಡೆದು ಕಲಿಕೆ ಫಲ ಪ್ರದವಾಗಬೇಕಾದರೆ ಕೆಲ ನಿಯಮಗಳು ಅತ್ಯಗತ್ಯ. ಆ ನಿಯಮಗಳನ್ನು ರೂಪಿಸುವಾಗ ಮಕ್ಕಳನ್ನು ಬಳಸಿಕೊಳ್ಳಬೇಕು. ಇಲ್ಲದಿರೆ ಅವು ಶಿಕ್ಷಕರು ರೂಪಿಸಿದ ನಿಯಮಗಳು ಎಂದು ಮಕ್ಕಳು ಆಸಕ್ತಿ ವಹಿಸದೆ, ನಿಯಮಗಳ ಪಾಲನೆಗೆ ಉತ್ಸುಕತೆ ತೋರುವುದಿಲ್ಲ. ಹಾಗಾಗಿ ಕಲಿಕೆಯ ಗುರಿ ತಲುಪಲು ಶಿಕ್ಷಕರು ಪೂರ್ವ ಸಿದ್ಧತೆಗೊಂಡು, ಜಾಣ್ಮೆಯಿಂದ ಮಕ್ಕಳಿಂದಲೇ ನಿಯಮಗಳನ್ನು ಸಿದ್ಧಪಡಿಸಿದರೆ ಹೆಚ್ಚು ಸೂಕ್ತ.

ನಿಯಮಗಳನ್ನು ರಚಿಸಲು ಹೊರಟಾಗ ಮೊದಲು ಮಕ್ಕಳು ತಮಗೆ ಗೊತ್ತಿರುವ ಎಲ್ಲಾ ನಿಯಮಗಳನ್ನು ಹೇಳುತ್ತಾರೆ. ಅವರು ಹೇಳಿದ್ದನ್ನೆಲ್ಲಾ ಶಿಕ್ಷಕ ಕಪ್ಪುಹಲಗೆ ಮೇಲೆ ಬರೆಯಬೇಕು. ನಿಯಮಗಳನ್ನು ಬರೆಯುವಾಗ ಸಾಧ್ಯವಾದಷ್ಟು ಧನಾತ್ಮಕವಾಗಿ ಬರೆಯಬೇಕು. ಉದಾಹರಣೆಗೆ, ನಿಯಮ ಹೇಳುವಾಗ ಒಂದು ಮಗು "ನಾವು ಶಾಲೆಗೆ ತಡವಾಗಿ ಬರಬಾರದು" ಎಂದು ಹೇಳುತ್ತದೆ. ಶಿಕ್ಷಕರು ತಕ್ಷಣ ಎಚ್ಚೆತ್ತುಕೊಂಡು ಅದನ್ನು ಹೀಗೆ ಬರೆಯೋಣ ಎನ್ನುತ್ತಾ "ಶಾಲೆಗೆ ನಾವುಗಳು ಮುಂಚಿತವಾಗಿ ಬರಬೇಕು" ಎಂದಾಗ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ.





ವಿದ್ಯಾರ್ಥಿಗಳು ನಿಯಮಗಳನ್ನು ಹೇಳಿದ ಮೇಲೆ ಇನ್ನು ಕೆಲವು ಅಗತ್ಯವಾದಂತಹವು ಉಳಿದಿದ್ದರೆ ಶಿಕ್ಷಕರು ಅವನ್ನು ಹೇಳಬೇಕು.



**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
**ಶಿಕ್ಷಕರು**
soppi.mata@gmail.com

ಅದಕ್ಕೆ ಮಕ್ಕಳು ಖಂಡಿತವಾಗಿ ದನಿಗೂಡಿಸುತ್ತಾರೆ. ಮಕ್ಕಳ ಸುರಕ್ಷತೆ ಕುರಿತು ಅಥವಾ ಕೊನೆ ಗಂಟೆ ಬಾರಿಸಿದಾಗ ಇರಬೇಕಾದ ವರ್ತನೆಗಳು ಹೇಗಿರಬೇಕು. ಈ ತರಹದ ನಾನಾ ಬಗೆಯಲ್ಲಿ ಮಕ್ಕಳಿಂದಲೇ ಪಾಲಿಬಹುದಾದವುಗಳನ್ನೆಲ್ಲಾ ಪಟ್ಟಿ ಮಾಡುತ್ತಾ ಹೋಗಬೇಕು.

ಶಿಕ್ಷಕರು ನಿಯಮಗಳನ್ನು ಇನ್ನು ಅರ್ಥವತ್ತಾಗಿ ಜಾರಿಗೆ ತರಬೇಕು ಎಂದು ಯೋಚಿಸಿದಲ್ಲಿ ಅದಕ್ಕೂ ಕೆಲವು ಮಾರ್ಗಗಳಿವೆ. ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಸನ್ನಿವೇಶಗಳನ್ನು ಕೊಡಬೇಕು. ಆ ಸಮಯದಲ್ಲಿ ಪಾಲಿಸಬೇಕಾದವುಗಳ ಬಗ್ಗೆ ಅವರೇ ಚರ್ಚೆ ನಡೆಸಲಿ. ಆ ಚರ್ಚೆಯ ಫಲದಿಂದ ಅವರ ನಿರೀಕ್ಷೆ, ಆಸಕ್ತಿಗಳು ತನ್ನಿಂತಾನೆ ಹೊರ ಬರುತ್ತವೆ. ಅವುಗಳ ಪಾಲನೆಯಲ್ಲಿ ಸಹಜವಾಗಿ ಅವರ ಆಸಕ್ತಿ ಅಧಿಕವಾಗಿರುತ್ತದೆ. ಅವು ಪರಿಣಾಮಕಾರಿಯಾದ ನಿಯಮಗಳಾಗುತ್ತವೆ.

ನಿಯಮಗಳನ್ನು ರೂಪಿಸುವಾಗ ಅನುಕೂಲವಾಗಲು ಕೆಲವು ವಿಭಾಗಗಳನ್ನು ಮಾಡಿಕೊಳ್ಳಬಹುದು. ತರಗತಿ ಒಳಗಡೆಯಲ್ಲಿನ ವರ್ತನೆಗಳು ಹೇಗಿರಬೇಕು. ಬೋಧನೆ ಸಮಯದಲ್ಲಿ ಪಾಲಿಸಬೇಕಾಧ ಅಂಶಗಳು. ಅಂದರೆ ಪಾಠದ ನಡುವೆ ಮಾತನಾಡುವ ಅಗತ್ಯ ವಿದ್ದರೆ ಕೈ ಎತ್ತಿ ಸಂದೇಹಗಳನ್ನು ಪರಿಹರಿಸಿಕೊಳ್ಳುವುದು. ಹೇಳಿದ ಕೆಲಸ ಮುಗಿದ ಮೇಲೆ ಮುಗಿದಿದೆ ಎಂದು ತಿಳಿಸುವ ವಿಧಾನಕ್ಕೆ ಸಂಜ್ಞೆ ರೂಪಿಸುವುದು. ತರಗತಿ ಹೊರಗೆ ಹೋಗುವಾಗ ಅನುಸಿರಬೇಕಾದ ನಿಯಮಗಳು. ಶಿಕ್ಷಕರಿಲ್ಲದ ಸಮಯದಲ್ಲಿ ನಡೆದುಕೊಳ್ಳುವ ರೀತಿಗಳು. ಗುಂಪು ಕಲಿಕೆಯಲ್ಲಿರುವಾಗ ಯಾವ ಅಂಶಗಳನ್ನು ಪರಿಗಣಿಸಬೇಕು. ಬೇರೆಯವರ ಸಹಾಯ ಪಡೆಯುವಾಗ ಹೇಗಿರಬೇಕು. ಶಾಲೆಗೆ ಸಂದರ್ಶಕರು ಬಂದಾಗ ಹೇಗೆ ವರ್ತಿಸಬೇಕು. ಈ ತರಹ ನಾನಾ ವಿಭಾಗಗಳನ್ನು ಮಾಡಿಕೊಂಡು ನಿಯಮಗಳನ್ನು ರೂಪಿಸಿದಲ್ಲಿ ಶಿಕ್ಷಕರು ಶಿಸ್ತು, ಶಿಕ್ಷೆಗೆ ಮಾರುಹೋಗುವ ಅಗತ್ಯವೇ ಬೀಳುವುದಿಲ್ಲ.

ಕೆಲವು ಸಾರಿ ಮಾತನಾಡುವ ಅವಶ್ಯಕತೆ ಇರುವುದಿಲ್ಲ. ಅಂತಹ ಸಮಯಕ್ಕೆ ಸಂಜ್ಞೆಗ್ಗಳನ್ನು ಅನುಸರಿಸಬೇಕು. ಆ ಸಂಜ್ಞೆಗ್ಗಳನ್ನೂ ಮಕ್ಕಳೇ ನಿರ್ಧರಿಸಲಿ. ಶಿಕ್ಷಕರು ಅವುಗಳ ಅರ್ಥವನ್ನು ಸ್ಪಷ್ಟವಾಗಿ ನಿರೂಪಿಸಬೇಕು. ನಿಯಮಗಳ ಪಟ್ಟಿ ಬರೆಯುವಾಗ ಮಕ್ಕಳು ಹೆಚ್ಚು ಹೆಚ್ಚು ಭಾಗವಹಿಸಲು ಅವಕಾಶ ನೀಡಬೇಕು. ಚರ್ಚೆ ನಡೆಸುತ್ತಾ ನಿಯಮಗಳ ಪಟ್ಟಿಯನ್ನು ಸಿದ್ಧಪಡಿಸಬೇಕು.

ಪಟ್ಟಿ ಸಿದ್ಧವಾದಮೇಲೆ ಮಕ್ಕಳಿಂದ ಅವುಗಳಿಗೆ ಒಪ್ಪಿಗೆಯನ್ನು ಪಡೆಯಬೇಕು. ಒಪ್ಪಿಗೆ ನಂತರ ಅವು ಪಾಲಿಸಲೇಬೇಕಾದ ನಿಯಮಗಳಾಗುತ್ತವೆ ಎಂದು ತಿಳಿಹೇಳಬೇಕು. ಮಕ್ಕಳು ಒಪ್ಪಿದ ಮೇಲೆ ಅವುಗಳನ್ನು ಡ್ರಾಯಿಂಗ್ ಶೀಟ್ ಮೇಲೆ ದಪ್ಪ ಅಕ್ಷರಗಳಲ್ಲಿ ಎಲ್ಲರಿಗೂ ಸ್ಪಷ್ಟವಾಗಿ ಕಾಣುವಂತೆ ಬರೆಯಬೇಕು. ಅದರ ಕೆಳಗಡೆ ಎಲ್ಲಾ ಮಕ್ಕಳಿಂದ ಅದಕ್ಕೆ ಒಪ್ಪಿಗೆ ಯಾಗಿ ಸಹಿ ಪಡೆಯಬೇಕು. ಆ ಹಾಳೆಯನ್ನು ತರಗತಿ ಕೊಠಡಿ ಒಳಗೆ ಎಲ್ಲರಿಗೂ ಕಾಣುವಂತೆ ತೂಗುಹಾಕಬೇಕು. ಅಲ್ಲಿಗೆ ಶಿಕ್ಷಕರ ಕೆಲಸ ಅರ್ಧ ಯಶಸ್ವಿಯಾದಂತೆ. ಇನ್ನು ಅರ್ಧ ಯಶಸ್ವಿಯಾಗಬೇಕಾದರೆ ಶಿಕ್ಷಕರು ಖುದ್ದಾಗಿ ಆ ನಿಯಮಗಳನ್ನು ಪಾಲನೆಮಾಡಬೇಕು. ಆಗ ಮಕ್ಕಳಿಗೆ ಅವುಗಳ ಮೇಲೆ ಆತ್ಮವಿಶ್ವಾಸ ಮೂಡಿ ನಿಯಮಗಳನ್ನು ಮೀರುವ ಸಾಹಸಕ್ಕೆ ಯಾರು ಕೈ ಕಾಕುವುದಿಲ್ಲ.

ಒಮ್ಮೆ ಜಾರಿಗೆ ತಂದ ನಿಯಮಗಳನ್ನು ಸಂರಕ್ಷಿಸಿಕೊಂಡು ಹೋಗುವುದು ಬಹಳ ಜವಾಬ್ದಾರಿ ಕೆಲಸ. ಶಿಕ್ಷಕರು ತಮ್ಮ ನೆರವಿಗೆ ಮಕ್ಕಳ ಒಂದು ಸಮಿತಿಯನ್ನು ರಚಿಸಿಕೊಳ್ಳಬಹುದು. ನಿಯಮಗಳನ್ನು ಮೀರಿದ ಮಕ್ಕಳಿಗೆ ದಂಡನೆಯ ಪ್ರಯೋಗಗಳನ್ನು ಮಾಡಬಾರದು. ಮಕ್ಕಳು ಯಾರೂ ಗೊತ್ತಿದ್ದು ತಪ್ಪು ಮಾಡುವುದಿಲ್ಲ. ನಿಯಮ ಪಾಲನೆಯಲ್ಲಿ ಎಡವಿದ ಮಕ್ಕಳಿಗೆ ನಿಯಮಗಳ ಬಗ್ಗೆ ತಿಳಿಹೇಳಿ ಜಾಗೃತಿ ಮೂಡಿಸಬೇಕು. ಅಂಥವರ ಕಡೆಗೆ ವೈಯಕ್ತಿಕ ಗಮನ ನೀಡಬೇಕು. ಮಗುವಿನ ಆ ಸಂಧರ್ಭ ಅಥವಾ ಸಮಸ್ಯೆಯ ಕಾರಣವನ್ನು ಪತ್ತೆ ಹಚ್ಚಬೇಕು. ಪರಿಹಾರಕ್ಕೆ ಹೊಸ ಹೊಸ ಮಾರ್ಗಗಳನ್ನು ಕಂಡುಕೊಳ್ಳಬೇಕು. ಕೆಲ ಸಾರಿ ನಿಯಮಗಳನ್ನು ಬದಲಾಯಿಸಬೇಕಾಗಿ ಬಂದಾಗ ಮಕ್ಕಳೊಂದಿಗೆ ಚರ್ಚಿಸಿ ಬದಲಾಯಿಸಬಹುದು.

ಇವನ್ನೆಲ್ಲಾ ನಮ್ಮ ತರಗತಿಯಲ್ಲಿ ಮಾಡಲು ಸಾಧ್ಯವೇ ? ಎಂದು ಮೂಗು ಮುರಿಯಬೇಡಿ. ಆರಂಭದಲ್ಲಿ ಸ್ವಲ್ಪ ಸಮಸ್ಯೆ ಎನಿಸಿದರೂ, ಶಿಕ್ಷಕರ ಸಾಕಷ್ಟು ಸಮಸ್ಯೆಗಳು ಇದರಿಂದ ತಮ್ಮಷ್ಟಕ್ಕೆ ತಾವೇ ಮಂಜಿನಂತೆ ಕರಗಿಹೋಗುತ್ತವೆ. ಒಮ್ಮೆ ಮಾಡಿ ನೋಡಿ ಅದರ ಫಲವನ್ನು ಅನುಭವಿಸಿದ ಮೇಲೆ ಅದರ ಸತ್ವ ತಿಳಿಯುವುದು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

**ಓದುಗರ ಗಮನಕ್ಕೆ**

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಅನಾಥರ ರಕ್ಷಣೆಗಾಗಿ ಚಿನ್ನ ಮಾರಿದ ಅಮ್ಮ

ಅಮ್ಮ ಎಂದರೆ ದೇವರ ಪ್ರತಿರೂಪ ಎಂದು ...ಹೇಳುತ್ತೇವೆ ಕೇಳಿದ್ದೇವೆ..ಆದರೆ.. ಈ ತಾಯಿ ತಾನು ಜನ್ಮ ಕೊಡದೇ ಯಾರಿಗೂ ಬೇಡದವರನ್ನು ಅಪ್ಪಿಕೊಳ್ಳುವ... ಮಹಾತಾಯಿ ಇವರು ಅನಾಥರ ರಕ್ಷಣೆಗೆ ನಿಂತ ದೇವರ.

ಈ ಮಾತು ನಮ್ಮನ್ನು ಹಡೆದ ತಾಯಿಗೆ ನಾವು ಹೇಳುತ್ತೇವೆ. ಆದರೆ ನಾವು ಈಗ ಹೇಳಹೊರಟಿರುವುದು ವಿಜಯನಗರ ಜಿಲ್ಲೆಯ ಶ್ರೀ ಕ್ಷೇತ್ರ ಕೊಟ್ಟೂರಿನಲ್ಲಿರುವ ರುದ್ರಮ್ಮ ವೃದ್ಧಾಶ್ರಮದಲ್ಲಿರುವ ಅಮ್ಮ ರುದ್ರಮ್ಮನವರ ಬಗ್ಗೆ. ಇವರು ಚಿಕ್ಕ ವಯಸ್ಸಿನಲ್ಲಿ ಎಲ್ಲಾ ಹೆಣ್ಣು ಮಕ್ಕಳಂತೆ ಅನೇಕ ಕನಸುಗಳನ್ನು ಕಟ್ಟಿಕೊಂಡಿದ್ದವರು. ಅವರ ಪತಿಯವರು ವೈದ್ಯರಾಗಿದ್ದರೂ ಸಂಬಳ ಬಹಳ ಕಡಿಮೆ ಬರುತ್ತಿತ್ತು. ಇವರಿಗೆ ಮಕ್ಕಳಿರಲಿಲ್ಲ ಯಾರೋ ಬಿಟ್ಟು ಹೋದ ಮಗುವನ್ನು ತನ್ನ ಮಗುವೆಂದು ಸಾಕೋಣ ಎಂಬ ಗಂಡನ ಮಾತಿಗೆ ಒಪ್ಪಿ ಸಾಕಿದರು. ವಿರೇಶ ಎಂದು ಕರೆದರು. ದಿನಕಳೆದಂತೆ ತಿಳಿಯಿತು ಮಗು ಅಂಗವಿಕಲ ಎಂದು ಆದರೂ ದೇವರು ನಮಗೆ ಕರುಣಿಸಿರುವ ಕೂಸು ಎಂದು ಆ ಮಗುವನ್ನು ಅಪ್ಪಿ ಮುದ್ದಾಡಿ ಸಾಕಿದರು. ನಂತರ ಪತಿಯನ್ನು ಕಳೆದುಕೊಂಡು ಮುಂದೆ ಏನು ಮಾಡಬೇಕು ಎಂಬ ಯೋಚನೆ ಶುರುವಾಯಿತು ತಮಗೆ ಬರುವ ಪಿಂಚಣಿ ಹಣದಿಂದ ಯಾರಿಗೂ ಬೇಡವಾದ ಅನಾಥರನ್ನು ವೃದ್ಧರನ್ನು ಕರೆದುಕೊಂಡು ಬಂದು ತಮ್ಮೊಂದಿಗೆ ಇಟ್ಟುಕೊಂಡು ಅವರಿಗೆಲ್ಲಾ ಊಟ ವಸತಿ ಬಟ್ಟೆ ಉಚಿತವಾಗಿ ಕೊಡುವುದರ ಮೂಲಕ ಅಮ್ಮನವರು ರುದ್ರಮ್ಮ ವೃದ್ಧಾಶ್ರಮ ತೆರೆದರು. ಇದು ಅವರ ಪತಿಯವರ ಆಸೆಯೂ ಆಗಿತ್ತು. ಹೀಗೆ ಹೊರಟ ಅಮ್ಮನವರಿಗೆ ಸಿಕ್ಕಿದ್ದು ಮಕ್ಕಳಿಗೆ ಬೇಡವಾದ ತಾಯಿ ತಂದೆಯರು ಅವರನ್ನು ತಂದು ತಮ್ಮ ಆಶ್ರಮಕ್ಕೆ ಸೇರಿಸಿ ಕೊಂಡರು.ಅಮ್ಮನವರ ಹೃದಯವಂತಿಕೆ ಕಂಡು ಹಲವಾರು ದಾನಿಗಳು ಉಧಾರವಾಗಿ ಆಶ್ರಮಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿದರು. ಅಮ್ಮನವರು ಆಶ್ರಮ ನೆಡೆಸಬೇಕೆಂದು ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ಹಿಡದೆ ಸತತವಾಗಿ ಆಶ್ರಮದಲ್ಲಿ ಏನೂ ಕೊರತೆ ಆಗದಂತೆ ತಮ್ಮಲ್ಲಿದ್ದ ಆಭರಣಗಳನ್ನು ಆಸ್ತಿಯನ್ನು ಮಾರಿ ನನನ್ನು ನಂಬಿ ಬಂದವರಿಗೆ ನಾನು ತಿನ್ನುವ ಒಂದು ತುತ್ತಿನಲ್ಲಿ ಅವರಿಗೂ ಒಂದು ತುತ್ತು ಕೊಡುವೆಯೆಂದು ಎಂದು ಹೇಳುವ ಹೃದಯವಂತಿಕೆ ಸಾಮಾನ್ಯರಿಗೆ ಬರಲು ಸಾಧ್ಯವಿಲ್ಲ. ಈಗ ಎಂಟು ಮಂದಿ ಅಜ್ಜಿಯರು ಐದು ಮಂದಿ ಅಜ್ಜರು ಇದ್ದಾರೆ ಅದರಲ್ಲಿ ಇಬ್ಬರು ಮಕ್ಕಳು ಅಂಗವಿಕಲರನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಇದು ಸಾಮಾನ್ಯ ಜನರಿಂದ ಆಗದ ಕೆಲಸ. ನಾವು ಪ್ರತಿ ವರ್ಷ ರುದ್ರಮ್ಮನವರ ಆಶ್ರಮಕ್ಕೆ ನಮ್ಮ ಮಕ್ಕಳ ಹುಟ್ಟುಹಬ್ಬಕ್ಕೆಂದು ಅಲ್ಲಿಗೆ ಹೋದಾಗ ಅವರಿಗೆ ಬೇಕಾದ ದಿನಸಿ ಪದಾರ್ಥಗಳನ್ನು ಕೊಟ್ಟು ಮತ್ತೆ ಏನಾದರೂ ಬೇಕಿದ್ರೆ ಹೇಳಿ ಎಂದರೆ ಅವರದು ಒಂದೇ ಮಾತು ಗುರು ಕೊಟ್ಟೂರೇಶ್ವರ ಇವತ್ತು ಇಷ್ಟು ನೆಡೆಸಿದ್ದಾನೆ ನಾಳೆ ಇನ್ಯಾರಿನಿಂದಲೋ ನೆಡೆಯುತ್ತೆ ಚಿಂತೆಯಿಲ್ಲ ಎನ್ನುವ ಅಮ್ಮನವರ ಮಾತಿನ ದೃಢತೆ ಆತ್ಮವಿಶ್ವಾಸ ಅಚಲವಾಗಿದೆ. ಅವರಲ್ಲಿ ಆಶ್ರಯ ಪಡೆದವರೂ ಕೂಡ ನಾವು ನಮ್ಮ ಉಸಿರುವವರೆಗೂ ಅಮ್ಮನೊಂದಿಗೆ ಇರುತ್ತೇವೆ ಮತ್ತೆ ಮಕ್ಕಳು ಬಂದು ಕರೆದರೂ ನಾವು ಇಲ್ಲೇ ಇರುತ್ತೇವೆ ಹೋಗಲ್ಲ ಈ ಮಹಾತಾಯಿ ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ ಇನ್ನೇನು ಬೇಕು ಎನ್ನುತ್ತಾರೆ. ಆತ್ಮೀಯರೇ ರುದ್ರಮ್ಮನವರ ತ್ಯಾಗ ಸೇವಾಮನೋಭಾವ ಹೃದಯವಂತಿಕೆ ಸಾಮಾನ್ಯರಿಗೆ ಬಾರದು. ಅವರ ಸಾಧನೆಯ ಬಗ್ಗೆ ಪ್ರತಿಬಾರಿ ಆಶ್ರಮಕ್ಕೆ ಹೋಗಿ ಬಂದಾಗ ಹೊಸ ಹೊಸ ವಿಚಾರಗಳು ನಮಗೆ ದೊರಕುತ್ತವೆ ಈ ಬಾರಿ ನಮಗೆ ಅವರು ನೆಡೆದು ಬಂದ ದಾರಿ ಆಧಾರಿತ ಉಜ್ಜಿನಿ ರುದ್ರಪ್ಪನವರು ಬರೆದು ಅಮ್ಮ ಎಂಬ ಪುಸ್ತಕದ ಪ್ರತಿಯನ್ನು ಅಮ್ಮನವರಿಂದಲೇ ಪಡೆದಿದ್ದು ನಮ್ಮ ಪುಣ್ಯವೇ ಆಗಿತ್ತು. ಅದನ್ನು ಓದಿದ ಮೇಲೆ ತಿಳಿಯಿತು ಅದೇನೆಂದರೆ ಇಷ್ಟು ದಿನ ರುದ್ರಮ್ಮನವರು ನಮಗೆ ತಾಯಿ ಆಗಿದ್ದರು ಆದರೆ ಅವರ ಜೀವನದ ಹಾದಿ ಕಥೆ ಸಾಗಿರುವುದು ಅಷ್ಟು ಸುಲಭವಾದುದ್ದಲ್ಲ ಎಂದು ತಿಳಿಯಿತು ಅಲ್ಲದೆ ಅವರು ಈ ವೃದ್ಧ ಆಶ್ರಮ ಮುಂದುವರೆಸಲು ಪಟ್ಟ ಕಷ್ಟ ಸಂಬಂದಿಕರ ನಿಷ್ಠುರದ ಮಾತುಗಳನ್ನು ಕೇಳಿದರೂ ಆಶ್ರಮ ನೆಡೆಸುವುದನ್ನು ಬಿಡುವ ಮಾತಿಲ್ಲದೆ ಮುಂದುವರೆದರು. ರುದ್ರಮ್ಮನವರು ಅನಾಥರು –ವೃದ್ಧರನ್ನು ಪೋಷಿಸಲು ಧರೆಗೆ ಬಂದ ಮಹಾತಾಯಿ ಎಂದರೆ ತಪ್ಪಾಗಲಾರದು. ಜೀವನ ಕಷ್ಟವಾಯಿತು ಎಂದು ಜೀವಕ್ಕೆ ತೊಂದರೆ ಮಾಡಿಕೊಳ್ಳುವ ಈ ಕಾಲದಲ್ಲಿ ಇಂತಹವರನ್ನು ನೋಡಿ ಕಲಿಯಬೇಕು.ನಾವು ಆ ಭಗವಂತನಲ್ಲಿ ಕೇಳಿಕೊಳ್ಳುವುದು ಇಷ್ಟೇ ಅಮ್ಮನವರಿಗೆ ಇನ್ನಷ್ಟು ಆರೋಗ್ಯ ಆಯಸ್ಸುಕೊಡು ಎಂದು.





**। ಜಿ ಆರ್ ಬಸವರಾಜೇಶ್ವರಿ**
ಸರ್ಕಾರಿ ಪ್ರೌಢಶಾಲೆ, ಹಗರಿಗಜಾಪುರ

# ಕಲ್ಲಂಗಡಿ ಬೆಳೆಗಾರರಿಗೆ ಸಲಹೆಗಳು

## ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಎಂ.ವಿ.ರವಿ ಸೂಚನೆ । ನುಸಿಗಳ ರೋಗ ಹತೋಟಿಗೆ ತಜ್ಞರ ಸಲಹೆ ಪಡೆಯಿರಿ


■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯಲ್ಲಿ ಕಲ್ಲಂಗಡಿ ಬೆಳೆಯಲು ಈಗ ಸಕಾಲವಾಗಿದ್ದು, ರೈತರು ಈ ಋತುವಿನಲ್ಲಿ ಕಲ್ಲಂಗಡಿ ಬೆಳೆಯಬಹುದು ಎಂದು ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಎಂ.ವಿ. ರವಿ ಅವರು ತಿಳಿಸಿದ್ದಾರೆ.

ಉಷ್ಣಾಂಶ ಪಡೆದುಕೊಳ್ಳುವ ಸಾಮರ್ಥ್ಯ ಇರುವ ಈ ಬೆಳೆಗೆ ಕೊಪ್ಪಳ ಜಿಲ್ಲೆ ತುಂಬಾ ಸೂಕ್ತ ಪ್ರದೇಶವಾಗಿದೆ. ಭೂಮಿಯ ಉಷ್ಣತೆ 20 ಡಿಗ್ರಿ ಸೆಲ್ಸಿಯಸ್‌ಕ್ಕಿಂತ ಹೆಚ್ಚಿರುವ ಮತ್ತು ಹವಾಗುಣ 25–32 ಡಿಗ್ರಿ ಸೆಲ್ಸಿಯಸ್ ಇರುವ ಬಯಲು ಸೀಮೆ ಪ್ರದೇಶ, ನೀರು ಬಸಿದು ಹೋಗುವ ಸಾಧಾರಣ ಎರೆ ಮಣ್ಣು, ಮರಳು ಮಿಶ್ರಿತ ಕೆಂಪು ಮಣ್ಣು ಹಾಗೂ ನದಿ ತೀರದ ಪ್ರದೇಶ ಈ ಬೆಳೆಗೆ ಸೂಕ್ತವಾಗಿದೆ. ನೇರ ಬೀಜ ಬಿತ್ತನೆ ಮಾಡಿದರೆ 400–500 ಗ್ರಾಂ. ಬೀಜ ಬೇಕು. 4 ರಿಂದ 6 ಅಡಿ ಸಾಲಿನಿಂದ ಸಾಲಿಗೆ ಹಾಗೂ 1.1/2–2 ಅಡಿ ಬೀಜ / ಸಸಿಗಳ ನಡುವಿನ ಅಂತರ ಸೂಕ್ತ. ಎಕರೆಗೆ 3700 ರಿಂದ 5500 ಸಸಿಗಳ ಸಂಖ್ಯೆ ಉತ್ತಮ. ಬಿತ್ತನೆಗೆ ಮೊದಲು ಭೂಮಿ ಉಳುಮೆ ಮಾಡಿ 5 ಟನ್ ಕಾಂಪೋಸ್ಟ್ ಗೊಬ್ಬರ ಅಥವಾ 10–12 ಟನ್ ಚೆನ್ನಾಗಿ ಕಳಿತ ಕೊಟ್ಟಿಗೆ ಗೊಬ್ಬರ ಜೊತೆಗೆ ಜೈವಿಕ ಗೊಬ್ಬರಗಳಾದ ಸೂಡೋಮೊನಾಸ, ಟ್ರೈಕೊಡರ್ಮಾ ಮತ್ತು ಬೇವಿನ ಹಿಂಡಿ 1 ಕ್ವಿಂಟಲ್ ಪ್ರತಿ ಎಕರೆಗೆ ಬೆರೆಸಿ ಮೂರು ವಾರಗಳ ನಂತರ 30 ರಿಂದ 40 ಸೆಂ. ಮೀ. ಎತ್ತರದ ಮಡಿಗಳನ್ನು 4 ರಿಂದ 6 ಅಡಿ ಅಂತರದಲ್ಲಿ ನಿರ್ಮಿಸಿ ಅವುಗಳ ಮೇಲೆ ಹನಿಕೆ (ಲ್ಯಾಟರಲ್) ಗಳನ್ನು ಎಳೆದು ಪ್ಲಾಸ್ಟಿಕ್ ಹೊದಿಕೆ ಹಾಕಿ, 2 ಅಡಿಗೊಂದರಂತೆ ನಾಟಿ ಮಾಡಬೇಕು.

**ಪ್ರಮುಖ ತಳಿಗಳು :**

ಶುಗರ್ ಬೇಬಿ, ಅರ್ಕಾ ಮಾಣಿಕ, ಅರ್ಕಾ ಆಕಾಶ, ಐಶ್ವರ್ಯ ಅಲ್ಲದೇ ನಾನಾ ಕಂಪನಿಗಳ ಹೈಬ್ರಿಡ್ ತಳಿಗಳು ಮಾರುಕಟ್ಟೆಯಲ್ಲಿ ಲಭ್ಯ. ಮಾರುಕಟ್ಟೆ ನೋಡಿ ಸೂಕ್ತ ತಳಿ ಆಯ್ಕೆ ಮಾಡಬೇಕು. ಸಸಿಗಳು ನಾಟಿ ಮಾಡುವಾಗ ಸೂಕ್ಷ್ಮಾಣು ಜೀವಿಗಳ ಮಿಶ್ರಣವಾದ ಅರ್ಕಾಕನ್ಸೋರ್ಶಿಯಂ 15–



20 ಗ್ರಾಂ. ಹಾಕಿ ನಾಟಿ ಮಾಡಿ 15 ನಿಮಿಷಗಳ ಕಾಲ ಡ್ರಿಪ್ ಮೂಲಕ ನೀರು ಕೊಡುವುದು ಉತ್ತಮ ಪದ್ಧತಿಯಾಗಿದೆ. ಮಲ್ಚಿಂಗ ಮಾಡಿದರೆ ರಸ ಹೀರುವ ಕೀಟಗಳ ಹತೋಟಿ ಸುಲಭ. ನಂತರ ಪ್ರತಿ ದಿನ ತೇವಾಂಶ ನೋಡಿ 8–10 ದಿನಗಳವರೆಗೆ 15 ನಿಮಿಷದಿಂದ 30 ನಿಮಿಷಗಳವರೆಗೆ ನೀರೊದಗಿಸಬೇಕು. ಪ್ರತಿ ವಾರ ನೀರು ಕೊಡುವ ಪ್ರಮಾಣ ಹೆಚ್ಚಿಸಬೇಕು. ಹೂವು ಬಿಡುವ ಸಮಯ ಮತ್ತು ಕಾಯಿ ಕಟ್ಟುವ ಸಮಯದಲ್ಲಿ ನೀರಿನ ಅಭಾವ ಇರದಂತೆ ನೋಡಿಕೊಳ್ಳಬೇಕು. ತಳಿಗಳನ್ನಾಧರಿಸಿ ನಾಟಿ ಮಾಡಿದ 3 ರಿಂದ 5 ವಾರಗಳ ನಂತರ ಹೂವು ಬಿಡಲು ಆರಂಭವಾಗುತ್ತದೆ. ಮೊದಲು ಗಂಡು ಹೂವು ಆರಂಭವಾಗಿ ನಂತರ ಹೆಣ್ಣು ಹೂವು ಬರುತ್ತದೆ. ಗಂಡು ಹೂವು ಕಿತ್ತು ಹಾಕಿ, ಹೆಣ್ಣು ಹೂವು ಬೆಳೆಯಲು ಬಿಡಬೇಕು. ಪ್ರತಿ ಬಳ್ಳಿಗೆ ಎರಡೇ ಹೆಣ್ಣು ಹೂವು ಬಿಟ್ಟು ಉಳಿದವುಗಳನ್ನು ತೆಗೆದು ಹಾಕಬೇಕು.

**ರೋಗ/ ಕೀಟಗಳು :**

ಬೂದಿ ರೋಗ, ಬೂಜು ತುಪ್ಪಟ ರೋಗ ಮತ್ತು ಅಂಗಮಾರಿ ರೋಗಗಳಲ್ಲದೆ ಕುಡಿ ಸಾಯುವ ರೋಗಗಳು ಮತ್ತು ಥ್ರಿಪ್ಸ ನುಸಿ, ಮೈಟ್ಸ ನುಸಿಗಳ ಹತೋಟಿಗೆ ತಜ್ಞರ ಸಲಹೆ ಪಡೆದು ಸೂಕ್ತ ಶಿಲೀಂಧ್ರ/ಕೀಟ ನಾಶಕಗಳನ್ನು ಬಳಸಬೇಕು.

**ಪೋಷಕಾಂಶಗಳ ನಿರ್ವಹಣೆ :**

ಹನಿ ನೀರಾವರಿ ಮೂಲಕ ತಜ್ಞರ ಸಲಹೆ ಪಡೆದು ನೀರಿನಲ್ಲಿ ಕರಗುವ ಗೊಬ್ಬರ ನಿಯಮಿತವಾಗಿ ಕೊಡಬೇಕು. ಬೆಳೆಗೆ ಸೂಕ್ಷ್ಮ ಲಘು ಪೋಷಕಾಂಶ ಸತು, ಬೋರಾನ್ ಮತ್ತು ಕ್ಯಾಲ್ಸಿಯಂ ಸೂಕ್ತ ಪ್ರಮಾಣದಲ್ಲಿ ಬಳಸಬೇಕು. ಪ್ರತಿ ಎಕರೆಗೆ ಒಂದು ಜೇನು ಪೆಟ್ಟಿಗೆ ಅಳವಡಿಸಿದರೆ ಪರಾಗಸ್ಪರ್ಷದಿಂದಾಗಿ ಹೆಚ್ಚಿನ ಇಳುವರಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಎಂ.ವಿ.ರವಿ: ಮೊ.ಸಂಖ್ಯೆ 9480247745, ಸಹ ಪ್ರಾಧ್ಯಾಪಕರಾದ ವಾಮನಮೂರ್ತಿ: ಮೊ.ಸಂಖ್ಯೆ 9482672039 ಇವರನ್ನು ಸಂಪರ್ಕಿಸಬಹುದು ಎಂದು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಪ್ರಕಟಣೆ ತಿಳಿಸಿದೆ.

# ಸಾರ್ವಜನಿಕರ ಮಾಹಿತಿಗೆ ಕರಡು ಮತದಾರರ ಪಟ್ಟಿ ಪ್ರಕಟ

■ **ಹಂಪಿ ಟೈಮ್ಸ್ ಕೊಪ್ಪಳ**

ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ನವೆಂಬರ್ 23ರ ಗುರುವಾರದಂದು ಕರ್ನಾಟಕ ಈಶಾನ್ಯ ಪದವೀಧರರ ಮತಕ್ಷೇತ್ರದ ಕರಡು ಮತದಾರರ ಪಟ್ಟಿಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದ್ದು, ಸಾರ್ವಜನಿಕರು ಪರಿಶೀಲಿಸಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿಗಳು ಹಾಗೂ ಕರ್ನಾಟಕ ಈಶಾನ್ಯ ಪದವೀಧರರ ಮತಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿಗಳಾದ ನಲಿನ್ ಅತುಲ್ ಅವರು ತಿಳಿಸಿದ್ದಾರೆ.

ಕರಡು ಮತದಾರರ ಪಟ್ಟಿಗಳನ್ನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ, ಸಹಾಯಕ ಆಯುಕ್ತರು, ಕೊಪ್ಪಳ ಮತ್ತು ಜಿಲ್ಲೆಯ ಎಲ್ಲಾ ತಹಶೀಲ್ದಾರರ ಕಛೇರಿಗಳಲ್ಲಿ ಮತ್ತು ಜಿಲ್ಲೆಯ ಜಾಲತಾಣ: koppal.nic.in ನಲ್ಲಿ ಪ್ರಕಟಿಸಲಾಗಿದ್ದು, ಸಾರ್ವಜನಿಕರು ಪರಿಶೀಲಿಸಿಕೊಳ್ಳಬಹುದು.

ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗಾಗಿ ಅಥವಾ ತೆಗೆದುಹಾಕಲು ಡಿಸೆಂಬರ್ 09 ರೊಳಗಾಗಿ ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರ ಕಛೇರಿಗಳಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಬಹುದು.

ಕೊಪ್ಪಳ ಜಿಲ್ಲೆಯ ಪದವೀಧರ ಮತದಾರರ ವಿವರಗಳು: ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿ 5 ಮತಗಟ್ಟೆಗಳಿದ್ದು, 1442 ಪುರುಷರು ಹಾಗೂ 585 ಮಹಿಳೆಯರು ಸೇರಿದಂತೆ ಒಟ್ಟು 2027 ಪದವೀಧರ ಮತದಾರರು, ಕನಕಗಿರಿ ತಾಲ್ಲೂಕಿನಲ್ಲಿ 3 ಮತಗಟ್ಟೆಗಳಿದ್ದು, 452 ಪುರುಷರು ಹಾಗೂ 181 ಮಹಿಳೆಯರು ಸೇರಿದಂತೆ ಒಟ್ಟು 633 ಪದವೀಧರ ಮತದಾರರು, ಕಾರಟಗಿ ತಾಲ್ಲೂಕಿನಲ್ಲಿ 2 ಮತಗಟ್ಟೆಗಳಿದ್ದು, 718 ಪುರುಷರು ಹಾಗೂ 321 ಮಹಿಳೆಯರು ಸೇರಿದಂತೆ ಒಟ್ಟು 1039 ಪದವೀಧರ ಮತದಾರರು, ಗಂಗಾವತಿ ತಾಲ್ಲೂಕಿನಲ್ಲಿ 4 ಮತಗಟ್ಟೆಗಳಿದ್ದು, 1674 ಪುರುಷರು ಹಾಗೂ 1045 ಮಹಿಳೆಯರು ಸೇರಿದಂತೆ 2719 ಪದವೀಧರ ಮತದಾರರು, ಯಲಬುರ್ಗಾ ತಾಲ್ಲೂಕಿನಲ್ಲಿ 2 ಮತಗಟ್ಟೆಗಳಿದ್ದು, 878 ಪುರುಷರು ಹಾಗೂ 352 ಮಹಿಳೆಯರು ಸೇರಿದಂತೆ ಒಟ್ಟು 1230 ಪದವೀಧರ ಮತದಾರರು, ಕುಕನೂರು ತಾಲ್ಲೂಕಿನಲ್ಲಿ 2 ಮತಗಟ್ಟೆಗಳಿದ್ದು, 675 ಪುರುಷರು ಹಾಗೂ 342 ಮಹಿಳೆಯರು ಸೇರಿದಂತೆ 1022 ಪದವೀಧರ ಮತದಾರರು ಮತ್ತು ಕೊಪ್ಪಳ ತಾಲ್ಲೂಕಿನಲ್ಲಿ 5 ಮತಗಟ್ಟೆಗಳಿದ್ದು, 2489 ಪುರುಷರು ಹಾಗೂ 1312 ಮಹಿಳೆಯರು ಸೇರಿದಂತೆ ಒಟ್ಟು 3801 ಪದವೀಧರ ಮತದಾರರು ಇದ್ದು, ಜಿಲ್ಲೆಯಲ್ಲಿ ಒಟ್ಟು 23 ಮತಗಟ್ಟೆಗಳಿದ್ದು, 8328 ಪುರುಷರು ಹಾಗೂ 4138 ಮಹಿಳೆಯರು ಸೇರಿದಂತೆ ಒಟ್ಟು 12471 ಪದವೀಧರ ಮತದಾರರು ಹೆಸರುಗಳನ್ನು ಕರಡು ಮತದಾರರ ಪಟ್ಟಿಯಲ್ಲಿ ಪ್ರಕಟಿಸಲಾಗಿದೆ.

ಈಶಾನ್ಯ ಪದವೀಧರರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ಅರ್ಹತಾ ದಿನಾಂಕ 01.11.2023 ಕ್ಕಿಂತ 3 ವರ್ಷಗಳ ಪೂರ್ವದಲ್ಲಿ ಅಂದರೆ 01.11.2020 ಕ್ಕಿಂತಲು ಹಿಂದೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವೀಧರರಾಗಿರಬೇಕು. ದಿನಾಂಕ 01.11.2020 ಕ್ಕಿಂತಲೂ ಮೊದಲು ಪದವಿ ಪಡೆದಿರುವಂತಹ ಪದವೀಧರರು ನಿಗದಿಪಡಿಸಿದ ನಮೂನೆ–18 ರಲ್ಲಿ (ಭಾವಚಿತ್ರದೊಂದಿಗೆ) ಭರ್ತಿ ಮಾಡಿದ ಅರ್ಜಿಯೊಂದಿಗೆ ಕಡ್ಡಾಯವಾಗಿ ತಾವು ಉತ್ತೀರ್ಣರಾಗಿರುವ ಅಂಕಪಟ್ಟಿ, ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಹಾಗೂ ತಾವು ವಾಸಿಸುತ್ತಿರುವ ವಾಸಸ್ಥಳದ ದಾಖಲೆಗಳನ್ನು ಸ್ವಯಂಧೃಡೀಕರಿಸಿ ಅಲ್ಲದೇ ಪತ್ರಾಂಕಿತ ಅಧಿಕಾರಿಯಿಂದ ದೃಢೀಕರಿಸಿ ಅರ್ಜಿಯೊಂದಿಗೆ ಡಿಸೆಂಬರ್ 09 ರೊಳಗಾಗಿ ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರ ಕಛೇರಿಗಳಲ್ಲಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಕಲಚೇತನ ವಿವಾಹಿತರಿಗೆ ಪ್ರೋತ್ಸಾಹಧನ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2023–24ನೇ ಸಾಲಿಗೆ ವಿವಾಹ ಪ್ರೋತ್ಸಾಹಧನದಡಿ, ವಿಕಲಚೇತನರೊಂದಿಗೆ ವಿವಾಹವಾದ ಸಾಮಾನ್ಯ ವ್ಯಕ್ತಿಗೆ ಪ್ರೋತ್ಸಾಹಧನ ನೀಡಲಾಗುತ್ತಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿಕಲಚೇತನರೊಂದಿಗೆ ವಿವಾಹವಾದ ಸಾಮಾನ್ಯ ವ್ಯಕ್ತಿಗೆ ರೂ.50,000/– ಪ್ರೋತ್ಸಾಹಧನ ನೀಡಲಾಗುವುದು. ದಿನಾಂಕ: 28–08–2013 ರ ನಂತರ ಮದುವೆ ಆದವರು ಈ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸಲು ಡಿಸೆಂಬರ್ 30 ಕೊನೆಯ ದಿನವಾಗಿದೆ.

ಅರ್ಜಿದಾರರು ನಿಗದಿತ ಅರ್ಜಿ ನಮೂನೆಯೊಂದಿಗೆ ಪೂರಕ ದಾಖಲೆಗಳಾದ ವಾಸಸ್ಥಳ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಯು.ಡಿ.ಐ.ಡಿ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಪ್ರತಿ(ಜಂಟಿ ಖಾತೆ), ಲಗ್ನ ಪತ್ರಿಕೆ ಮೂಲ ಪ್ರತಿ, ಮದುವೆ ನೋಂದಣಿ ಪ್ರಮಾಣ ಪತ್ರ, ರೂ.20/– ಗಳ ಬಾಂಡ್(ಈ ಮೊದಲು ಮದುವೆ ಆಗಿರುವುದಿಲ್ಲ ಎಂಬ ಕುರಿತು), ವೈದ್ಯಕೀಯ ಅರ್ಹತಾ ಪ್ರಮಾಣ ಪತ್ರ(ಸಾಮಾನ್ಯ ವ್ಯಕ್ತಿ), ವಿ.ಆರ್.ಡಬ್ಲ್ಯೂ, ಯುಆರ್‌ಡಬ್ಲ್ಯೂಮತ್ತು ಎಂಆರ್‌ಡಬ್ಲ್ಯೂ ಅವರ ವರದಿ ಹಾಗೂ 2 ಭಾವಚಿತ್ರಗಳೊಂದಿಗೆ ನಿಗದಿತ ದಿನಾಂಕದೊಳಗೆ ಕಛೇರಿಯ ಅವಧಿಯಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ ಆವರಣ, ಕೊಠಡಿ ಸಂಖ್ಯೆ 31, 32 ರಿಲಾಯನ್ಸ್ ಪೆಟ್ರೋಲ್ ಬಂಕ್ ಎದುರುಗಡೆ, ಹೊಸಪೇಟೆ ರಸ್ತೆ ಕೊಪ್ಪಳ ಇವರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಗಾಗಿ ದೂರವಾಣಿ ಸಂಖ್ಯೆ:08539–295460 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇವು ಪೂರೈಕೆಯಲ್ಲಿ ನಿರ್ಲಕ್ಷ್ಯ ಸಲ್ಲದು

**ಮೊದಲ ಪುಟದಿಂದ:** ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬರುವ ಸಾಧ್ಯತೆ ಇದ್ದು, ಸಮಸ್ಯೆ ಉಂಟಾಗಬಹುದಾದ ಗ್ರಾಮಗಳು, ಪ್ರದೇಶಗಳನ್ನು ಗುರುತಿಸಬೇಕು. ಅಂತಹ ಸ್ಥಳಗಳಲ್ಲಿ ಹೊಸದಾಗಿ ಕೊಳವೆಬಾವಿ ಕೊರೆಯಿಸುವುದು, ಕೊಳವೆಬಾವಿ ದುರಸ್ಥಿ, ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯುವುದರ ಜೊತೆಗೆ ಟ್ಯಾಂಕರ್ ಮೂಲಕವು ನೀರು ಪೂರೈಕೆಗೆ ಕ್ರಮ ಕೈಗೊಂಡು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಯಾವುದೇ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಮಾತನಾಡಿ,ಕುಡಿಯುವ ನೀರು ಪೂರೈಕೆಗಾಗಿ ಜಿಲ್ಲೆಯ ಗ್ರಾಮ ಪಂಚಾಯತಿಗೆ 10 ರಿಂದ 15 ಲಕ್ಷ ರೂ.ಗಳಷ್ಟು ಅನುದಾನವನ್ನು ಹದಿನೈದನೇ ಹಣಕಾಸು ಯೋಜನೆಯಡಿ ಮೀಸಲಿರಿಸಲಾಗಿದೆ. ಹೊಸದಾಗಿ ಕೊಳವೆಬಾವಿ ಕೊರೆಯಿಸಲು ಮತ್ತು ಪೈಪ್‌ಲೈನ್ ಅಳವಡಿಕೆಗೆ ಯಾವುದೇ ಅನುದಾನದ ಕೊರತೆ ಇರುವುದಿಲ್ಲ ಎಂದರು.

ಬಹುಗ್ರಾಮ ಕುಡಿಯುವ ನೀರಿನ ಯೋಜನೆ; ವಿಜಯನಗರ, ಚಿತ್ರದುರ್ಗ, ಪಾವಗಡ ಕುಡಿಯುವ ನೀರಿನ ಯೋಜನೆ ತ್ವರಿತವಾಗಿ ನಡೆಯುತ್ತಿದ್ದು ಡಿಸೆಂಬರ್ ಅಂತ್ಯದ ವೇಳೆ ಕೂಡ್ಲಿಗಿ ಪಟ್ಟಣಕ್ಕೆ ನೀರು ಪೂರೈಕೆ ಮಾಡಲಾಗುತ್ತಿದೆ. ಈಗಾಗಲೇ ಪ್ರಾಯೋಗಿಕ ಕಾರ್ಯಾಚರಣೆ ನಡೆಸಲಾಗಿದೆ ಎಂದು ಇಂಜಿನಿಯರ್ ಸಭೆಗೆ ತಿಳಿಸಿದಾಗ ಈ ವರ್ಷ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆ ಇದ್ದು ಬಹುಗ್ರಾಮ ಕುಡಿಯುವ ನೀರಿನ ಜಾಕ್‌ವೆಲ್‌ಗೆ ನೀರು ಲಭ್ಯವಾಗದಿದ್ದಲ್ಲಿ ಸಮಸ್ಯೆಯಾಗಲಿದ್ದು ಇದಕ್ಕೆ ಯೋಜನೆ ರೂಪಿಸಿಕೊಳ್ಳಬೇಕೆಂದು ಸೂಚನೆ ನೀಡಿದರು.

ಗೃಹಜ್ಯೋತಿ;ಸರ್ಕಾರದ ಗ್ಯಾರಂಟಿ ಯೋಜನೆಯಾದ ಗೃಹಜ್ಯೋತಿಯಡಿ ಹೆಚ್.ಬಿ.ಹಳ್ಳಿ ವಿಭಾಗ 144518, ಹೊಸಪೇಟೆ 70617, ಹರಪನಹಳ್ಳಿ 65011 ಸೇರಿ 280146 ಗ್ರಾಹಕರ ನೊಂದಣಿಯಾಗಿದ್ದಾರೆ. ಜಿಲ್ಲೆಯಲ್ಲಿ 315235 ಗ್ರಾಹಕರಿದ್ದಾರೆ. ಒಟ್ಟು ಗ್ರಾಹಕರಲ್ಲಿ 35089 ಆರ್. ಆರ್.ಸಂಖ್ಯೆ ಜ್ಯೋತಿಯಿಂದ ಹೊರಗುಳಿದಿವೆ ಎಂದರು.

ಗೃಹಲಕ್ಷ್ಮಿ; ಗೃಹಲಕ್ಷ್ಮಿಯಡಿ ಮನೆಒಡತಿಗೆ ಮಾಸಿಕ ಎರಡು ಸಾವಿರ ನೀಡುವ ಯೋಜನೆ ಇದಾಗಿದ್ದು ಜಿಲ್ಲೆಯಲ್ಲಿ ಗ್ರಾಮೀಣ ಭಾಗದ 199697 ಮತ್ತು ನಗರ, ಪಟ್ಟಣದಲ್ಲಿ 68568 ಸೇರಿ 268265 ಯಜಮಾನಿಯರು ಗೃಹಲಕ್ಷ್ಮಿಯಡಿ ನೊಂದಣಿಯಾಗಿದೆ. ಈಗಾಗಲೇ ಸೆಪ್ಟೆಂಬರ್ ಮಾಹೆಯವರೆಗೆ ಎರಡು ಸಾವಿರ ಪಾವತಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪನಿರ್ದೇಶಕಿ ಶ್ವೇತ ಮಾಹಿತಿ ನೀಡಿದರು. ಈ ವೇಳೆ ಉಸ್ತುವಾರಿ ಕಾರ್ಯದರ್ಶಿಯವರು ಈ ಯೋಜನೆಯಿಂದ ಅರ್ಹರು ಹೊರಗುಳಿಯದಂತೆ ಮನೆ ಮನೆ ಸರ್ವೆ ಮಾಡಿ ಒಂದು ತಿಂಗಳಲ್ಲಿ ಎಲ್ಲಾ ಅರ್ಹರಿಗೆ ಯೋಜನೆ ತಲುಪುವಂತೆ ಮಾಡಲು ಸೂಚನೆ ನೀಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ., ಅಪರ ಜಿಲ್ಲಾಧಿಕಾರಿ ಡಾ. ಅನುರಾಧ ಜಿ., ಉಪವಿಭಾಗಾಧಿಕಾರಿ ಮಹಮದ್ ಅಲಿ ಅಕ್ರಂಷಾ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ವಿಶ್ವ ವಿಕಲಚೇತನರ ದಿನಾಚರಣೆ : ವಿವಿಧ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**




ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ ವಿಶ್ವ ವಿಕಲಚೇತನರ ದಿನಾಚರಣೆ ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೃಷ್ಣಾ ಸಾ ಬಾಕಳೆ ಅವರು ತಿಳಿಸಿದ್ದಾರೆ.

ನ.27ರಂದು ಹೊಸಪೇಟೆ ನಗರದ ಜಿಲ್ಲಾಕ್ರೀಡಾಂಗಣದಲ್ಲಿ ಜಿಲ್ಲೆಯ ವಿಕಲಚೇತನರಿಗಾಗಿ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿರುತ್ತದೆ. ಡಿಸೆಂಬರ್ 03ರಂದು ನಗರದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮವನ್ನು ಹಾಗೂ ಅದೇ ದಿನ ಜಾಥಾ ಕಾರ್ಯಕ್ರಮವನ್ನು ಸಹ ಆಯೋಜಿಸಿದ್ದು, ಈ ಕಾರ್ಯಕ್ರಮಗಳಲ್ಲಿ ಜಿಲ್ಲೆಯ ಎಲ್ಲಾ ವಿಕಲಚೇತನರು ಭಾಗವಹಿಸಿ ಯಶಸ್ವಿಗೊಳಿಸಬೇಕು.

## ಕವಿ ಮನಸು

### ಸದ್ಗುರು ಸಿದ್ದೇಶ್ವರ....



ಕಣ್ಮುಂದೆ ಭವ್ಯಸೊಗಸಿನ
ಮಂದಹಾಸ ಸೂಸುವ
ಸದ್ಗುರು ಸಿದ್ದೇಶ್ವರರ
ಚಿತ್ರಪಟ ಸುಳಿದರೆ ಸಾಕು
ಮನದೊಳಗೆ ಅನನ್ಯ
ಸಂತಸದ ಹೊನಲು
ಹರಿಯುವಂತಹ ಭಾಸ !
ಪ್ರಾತಃ ಸ್ಮರಣೀಯ
ಸದ್ಗುರು ಸಿದ್ದೇಶ್ವರ
ತಮ್ಮಯ ನುಡಿ ನಡೆ
ಒಂದಾಗಿಸಿ ಬಾಳಿದ
ಸುಂದರ ಪರಿಯನು
ಜಗ ಮರೆಯದು
ಅನುಸರಿಸದೆ ಇರಲಾಗದು !
ಕರ್ಣಗಳಲಿ
ಸದ್ಗುರು ಸಿದ್ದೇಶ್ವರರ
ಅಮೃತವಾಣಿಯ ಝೇಂಕಾರ
ಮೊಳಗಿದರೆ ಸಾಕು
ಮೈ ಮನಗಳಲಿ
ಚಿತ್ತಾಕರ್ಷಕ ಚಿಟ್ಟೆ
ಹಾರಾಡಿ ಹದವಾದಂತೆ !
ಮನುಜ ಮತದ ನಡೆ
ವಿಶ್ವಪಥದಲಿ ಸದಾ ಸಾಗುತ
ನಲಿಯುತಿರಲಿಯೆಂಬ
ಅಮೋಘ ಸಂದೇಶಗಳ ಸಾರಿದ
ತಮ್ಮಯ ಪ್ರವಚನಾಮೃತದ
ಸವಿಸ್ಮೃತಿ ಅಚ್ಚಳಿಯದು ಅಚ್ಚಳಿಯದು
ನಮೋ ನಮಃ
ಸದ್ಗುರು ಸಿದ್ದೇಶ್ವರ .....


**– ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ**
**ಹೊಸಪೇಟೆ.**







## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 24-11-2023

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1596.85 ಅಡಿ |
| ಒಳ ಹರಿವು | 556 ಕ್ಯುಸೆಕ್ |
| ಹೊರ ಹರಿವು | 10741 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 17.722 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.28 ಅಡಿ |
| ಒಳ ಹರಿವು | 3134 ಕ್ಯುಸೆಕ್ |
| ಹೊರ ಹರಿವು | 8253 ಕ್ಯುಸೆಕ್ |
| ಸಾಮರ್ಥ್ಯ | 95.124 ಟಿಎಂಸಿ |

**Hagari Bommanahalli TALUK MSPC**
**Near APMC Tirumala Engineering Works Opp; Kottur Road, Hagaribommanahalli- 583212, Vijayanagara Dist.**

**Invitation to Tender**

Quotations are invited from suppliers for Purchase of Raw Materials and packing materials for manufacturing and supply of Nutritious Food to the beneficiaries under ICDS Scheme.
Important Dates

- Last date of submission of the duly filled quotation: 01-12-2023
- Last date for submission of samples: 01-12-2023 5.00PM
- Date of Opening Tenders: 02-12-2023 3:00PM
- Tender document will be available at the above mentioned MSPC office by paying 100Rs/-

For Further details regarding eligibility, specification and all other terms and conditions contact:
Name: Hagari Bommanahalli TALUK MSPC
Address: Near APMC Tirumala Engineering Works Opp; Kottur Road, Hagaribommanahalli- 583212, Vijayanagara Dist.
MSPTC Phone No: 9986687169
Technical assistance No: 7337682147

The Society reserves the right to accept or reject any bid or all bids without assigning any reasons.

**Kudligi TALUK MSPC**
**No. 171. NH15, Khanahosahalli Post Kudligi Taluk- 583218, Vijayanagara Dist**

**Invitation to Tender**

Quotations are invited from suppliers for Purchase of Raw Materials and packing materials for manufacturing and supply of Nutritious Food to the beneficiaries under ICDS Scheme.
Important Dates

- Last date of submission of the duly filled quotation: 01-12-2023
- Last date for submission of samples: 01-12-2023 5.00PM
- Date of Opening Tenders: 02-12-2023 3:00PM
- Tender document will be available at the above mentioned MSPC office by paying 100Rs/-

For Further details regarding eligibility, specification and all other terms and conditions contact:

Name: Kudligi TALUK MSPC
Address: No. 171. NH15, Khanahosahalli Post Kudligi Taluk, Vijayanagara District - 583218
MSPTC Phone No: 7899748213
Technical assistance No: 8123030467

The Society reserves the right to accept or reject any bid or all bids without assigning any reasons.

**Hospet TALUK MSPC**
**Door No:4/800 Kudligi Road, Near cinema Talkies, Mariyammanahalli. Pin-583222, Vijayanagara Dist.**

**Invitation to Tender**

Quotations are invited from suppliers for Purchase of Raw Materials and packing materials for manufacturing and supply of Nutritious Food to the beneficiaries under ICDS Scheme.
Important Dates

- Last date of submission of the duly filled quotation: 01-12-2023
- Last date for submission of samples: 01-12-2023 5.00PM
- Date of Opening Tenders: 02-12-2023 3:00PM
- Tender document will be available at the above mentioned MSPC office by paying 100Rs/-

For Further details regarding eligibility, specification and all other terms and conditions contact:
Name: Hospet TALUK MSPC
Address: Door No:4/800 Kudligi Road, Near cinema Talkies, Mariyammanahalli. Pin-583222, Vijayanagara Dist.
MSPTC Phone No: 9620092417
Technical assistance No: 8123030467

The Society reserves the right to accept or reject any bid or all bids without assigning any reasons.




**ಮೈಕ್ರೋ ನ್ಯೂಸ್**

## ತಾಲೂಕು ಕ.ಸಾ.ಪ.ದಿಂದ ಕನ್ನಡ ರಾಜ್ಯೋತ್ಸವ

**ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನ.25ರಂದು ಹಮ್ಮಿಕೊಳ್ಳಲಾಗಿದೆ ಎಂದು ಕಸಾಪ ತಾಲೂಕು ಅಧ್ಯಕ್ಷ ದೇವರಮನಿ ಕೊಟ್ರೇಶ ಹೇಳಿದರು.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇಲ್ಲಿನ ಡಾ.ಎಚ್.ಜಿ.ರಾಜ್ ಭವನದಲ್ಲಿ ನಡೆಯುವ ರಾಜ್ಯೋತ್ಸವ ಕಾರ್ಯಕ್ರಮವನ್ನು ಜಿಲ್ಲಾ ಕಸಾಪ ನಿಕಟ ಪೂರ್ವ ಅಧ್ಯಕ್ಷ ಸಿದ್ಧರಾಮ ಕಲ್ಮಠ ಉದ್ಘಾಟಿಸುವರು. ಹ.ಬೊ.ಹಳ್ಳಿಯ ಉಪನ್ಯಾಸಕ ಅಕ್ಕಿ ಬಸವೇಶ ಅವರು, ಕನ್ನಡ ನಾಡು ನುಡಿ ಹಾಗೂ ಕರ್ನಾಟಕ ನಾಮಕರಣದ ಮಹತ್ವ ಕುರಿತು ವಿಶೇಷ ಉಪನ್ಯಾಸ ನೀಡುವರು. ಜಿಲ್ಲಾ ಕಸಾಪ ಅಧ್ಯಕ್ಷ ನಿಷ್ಠಿ ರುದ್ರಪ್ಪ ಅಧ್ಯಕ್ಷತೆ ವಹಿಸಲಿದ್ದು, ತಹಸೀಲ್ದಾರ ಜಿಕೆ ಅಮರೇಶ, ಕಲಾಕೇಂದ್ರ ಅಧ್ಯಕ್ಷ ಎಂಎಂಜೆ ಸತ್ಯಪ್ರಕಾಶ, ಜಿಪಂ ಮಾಜಿ ಸದಸ್ಯ ಎಂಎಂಜೆ ಹರ್ಷವರ್ಧನ ಇತರರು ಅತಿಥಿಗಳಾಗಿ ಆಗಮಿಸುವರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಮಾಡಲಾಗುವುದು. ಕಾರ್ಯಕ್ರಮಕ್ಕೂ ಮೊದಲು ನಡೆಯುವ ತಾಯಿ ಭುವನೇಶ್ವರಿ ಭಾವಚಿತ್ರದ ಮೆರವಣಿಗೆಗೆ ಬಿಇಒ ಪದ್ಮನಾಭ ಕರಣಂ, ವರ್ತಕ ಪಿ.ಶ್ರೀಧರಶೆಟ್ಟಿ ಚಾಲನೆ ನೀಡುವರು ಎಂದು ಅವರು ತಿಳಿಸಿದ್ದಾರೆ.

## ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಪ್ರವಾಸ

**ಹಂಪಿ ಟೈಮ್ಸ್ ಬಳ್ಳಾರಿ**

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ನ.28 ಮತ್ತು 29ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು. ನ.28ರಂದು 04.10ಕ್ಕೆ ತೋರಣಗಲ್ಲಿಗೆ ಆಗಮಿಸುವರು. 04.40ಕ್ಕೆ ಸಂಡೂರು ತಾಲ್ಲೂಕಿನ ಕೋಡಾಲು ಮತ್ತು ರಾಜಾಪುರ ಗ್ರಾಮ ವ್ಯಾಪ್ತಿಯ ಹತ್ತಿ, ನವಣೆ ಮತ್ತು ಸಜ್ಜೆ ಬೆಳೆ ಹಾನಿ ಹಾಗೂ ಬರ ಪರಿಸ್ಥಿತಿ ವೀಕ್ಷಣೆ ನಡೆಸುವರು. ಸಂಜೆ 06ಕ್ಕೆ ತೋರಣಗಲ್ಲಿನ ಜಿಂದಾಲ್ ಅತಿಥಿ ಗೃಹದಲ್ಲಿ ವಾಸ್ತವ್ಯ ಮಾಡುವರು.

ನ.29ರಂದು ಬೆಳಿಗ್ಗೆ 09 ಗಂಟೆಗೆ ಹೊರಟು, 09.30ಕ್ಕೆ ಬಳ್ಳಾರಿ ತಾಲ್ಲೂಕು ವ್ಯಾಪ್ತಿಯ ಬೆಳಗಲ್ಲು ಮತ್ತು ಹಲಕುಂದಿ ಗ್ರಾಮ ವ್ಯಾಪ್ತಿಯ ತೊಗರಿ ಮತ್ತು ಸಜ್ಜೆ ಬೆಳೆ ಹಾನಿ ಹಾಗೂ ಬರ ಪರಿಸ್ಥಿತಿ ವೀಕ್ಷಣೆ ಮಾಡುವರು.

ನಂತರ ಬೆಳಿಗ್ಗೆ 10.30 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬಳ್ಳಾರಿ ಜಿಲ್ಲೆಯ ಕೃಷಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಬಳಿಕ 11.30ಕ್ಕೆ ಪತ್ರಿಕಾಗೋಷ್ಠಿ ನಡೆಸುವರು. ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ಹಾಗೂ ಕಾರ್ಯಕರ್ತರ ಅಹವಾಲು ಆಲಿಸುವರು. ನಂತರ ಮಧ್ಯಾಹ್ನ 12.30 ಕ್ಕೆ ಬಳ್ಳಾರಿಯಿಂದ ನಿರ್ಗಮಿಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಅವರು ತಿಳಿಸಿದ್ದಾರೆ.

## ಕೊಪ್ಪಳ ವಿವಿ ವಿದ್ಯಾರ್ಥಿಗಳಿಗೆ ಸೂಚನೆ

**ಹಂಪಿ ಟೈಮ್ಸ್ ಕೊಪ್ಪಳ:**

2023-24ನೇ ಶೈಕ್ಷಣಿಕ ಸಾಲಿನಲ್ಲಿ ಕೊಪ್ಪಳ ವಿಶ್ವವಿದ್ಯಾಲಯಕ್ಕೆ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದ ಅಭ್ಯರ್ಥಿಗಳು ಯುಯುಸಿಎಂಎಸ್ ಮುಖಾಂತರ ಸ್ನಾತಕೋತ್ತರ ಪದವಿಗಳಿಗೆ ಅರ್ಜಿ ಸಲ್ಲಿಸಿದ ನಂತರ ಅಡಕಗಳೊಂದಿಗೆ ಅದರ ಸಂಪೂರ್ಣ ಒಂದು ಪ್ರತಿಯನ್ನು ಕೊಪ್ಪಳ ವಿಶ್ವವಿದ್ಯಾಲಯದ ಕುಲಸಚಿವರು (ಪ್ರಭಾರ), ಕೊಪ್ಪಳ ವಿಶ್ವವಿದ್ಯಾಲಯ, 4ನೇ ಮಹಡಿ, ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯ, ತಳಕಲ್-583231 ಈ ಕಚೇರಿಗೆ ನವೆಂಬರ್ 27ರ ಸಂಜೆ 5.30ರೊಳಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿದೆ. ತಲುಪಿಸದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಎಂದು ಕೊಪ್ಪಳ ವಿಶ್ವವಿದ್ಯಾಲಯ ತಿಳಿಸಿದೆ.

# ಉಚ್ಚಂಗಿದುರ್ಗ ಧಾರ್ಮಿಕದಂತೆ ಶೈಕ್ಷಣಿಕವಾಗಿಯೂ ಹೆಸರಾಗಲಿ

### ಶ್ರೀ ರೇವಣಸಿದ್ದೇಶ್ವರ ರಾಜಗುರು ಕಟ್ಟಿಮನೆ ಮಹಾಸ್ವಾಮಿಗಳು ಆಶೀರ್ವಚನ

**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲ್ಲೂಕಿನ ಉಚ್ಚಂಗಿದುರ್ಗ ಗ್ರಾಮದಲ್ಲಿ ಉಚ್ಚಂಗೆಮ್ಮ ದೇವಿ ಪಾದಗಟ್ಟೆ ದೇವಸ್ಥಾನದ ಉದ್ಘಾಟನಾ ಸಮಾರಂಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪೂಜೆ ನೆರವೇರಿಸಿ ಸಾನಿಧ್ಯ ವಹಿಸಿದ ಶ್ರೀ ರೇವಣಸಿದ್ದೇಶ್ವರ ರಾಜಗುರು ಕಟ್ಟಿಮನೆ ಮಹಾಸ್ವಾಮಿಗಳು ಮಾತನಾಡಿ, ಶ್ರೀ ಉಚ್ಚಂಗೆಮ್ಮ ದೇವಿಗೆ ದಿನಾಲೂ ಸಹಸ್ರಾರು ಭಕ್ತರು ಬರುವುದರಿಂದ ಈ ಗ್ರಾಮ ಹೆಸರುವಾಸಿಯಾಗಿದೆ, ಪ್ರತಿಯೊಬ್ಬರೂ ದುಡಿಮೆ ಮಾಡಿ ಪ್ರಗತಿ ಸಾಧಿಸಬೇಕು, ಬಸವಣ್ಣನವರಂತೆ ಕಾಯಕವೇ ಕೈಲಾಸ ಎಂದು ನಂಬಿದವರು, ಎಲ್ಲಾ ಜಾತಿಯವರು ಸೇರಿ ಶ್ರೀ ರೇಣುಕಾದೇವಿಯ ಮೂರ್ತಿ ಸ್ಥಾಪನೆ ಮಾಡಿ ಊರಿಗೆ ಕೀರ್ತಿ ತಂದಿದ್ದಾರೆ.ಈ ಗ್ರಾಮ ಎಲ್ಲದರಲ್ಲೂ ಮುಂದುವರೆದಿದೆ, ಶೈಕ್ಷಣಿಕವಾಗಿ ಮುಂದುವರೆಯಬೇಕಾಗಿದೆ, ಹೊಸದಾಗಿ ಪದವಿ ಕಾಲೇಜ್ ಗಳನ್ನು ತೆರೆಯಬೇಕು ಎಂದು ಹೇಳಿದರು.

ಕಲ್ಲೇಶ್ ರಾಜ್ ಪಾಟೇಲ್ ದೇವಸ್ಥಾನ ಉದ್ಘಾಟಿಸಿ ಮಾತನಾಡಿ, ನೂತನ ದೇವಸ್ಥಾನಕ್ಕೆ ಊರಿನ ಗ್ರಾಮಸ್ಥರೆಲ್ಲಾ ಸೇರಿ ಪಾದಗಟ್ಟಿ ಹತ್ತಿರ ರೇಣುಕಾದೇವಿಯ ಮೂರ್ತಿಯನ್ನು ಹಾಗೂ ಕಟ್ಟಡವನ್ನು ಜಾತ್ಯತೀತ, ಪಕ್ಷಾತೀತವಾಗಿ ಗ್ರಾಮದ ಎಲ್ಲಾ ಭಕ್ತರು ಸೇರಿ ದೇವಿಯ



ಜೀರ್ಣೋದ್ದಾರವನ್ನು ಮಾಡಿದ್ದಾರೆ. ಗುಡ್ಡ ಹತ್ತಿ ಹೋಗಿ ದೇವಿಯ ದರ್ಶನ ಮಾಡಲು ಆಗದ ಭಕ್ತರಿಗೆ ಪಾದಗಟ್ಟಿ ಹತ್ತಿರ ದರ್ಶನ ಮಾಡಲು ಕೋಟ್ಯಂತರ ಭಕ್ತರಿಗೆ ಅನುಕೂಲವಾಗಿದೆ.

ಬರಗಾಲ ಬಂದಿದೆ, ಅದನ್ನು ಹೆದರಿಸುವಂತಹ ಶಕ್ತಿಯನ್ನು ಆ ದೇವಿ ಕರುಣಿಸಲಿ, ಮುಂದಿನ ದಿನಗಳಲ್ಲಿ ಒಳ್ಳೆಯ ಮಳೆ, ಬೆಳೆಯಾಗಲೆಂದು ಆ ದೇವಿಯಲ್ಲಿ ಪ್ರಾರ್ಥಿಸುತ್ತೇನೆ ಎಂದು ಹೇಳಿದರು.

ರೇಣುಕಾ ದೇವಿ ಜೀರ್ಣೋದ್ದಾರ ಸೇವಾ ಸಮಿತಿ ಅಧ್ಯಕ್ಷರಾದ ಎಸ್ ಹನುಮಂತಪ್ಪ ಮಾತನಾಡಿ, ಪಾದಗಟ್ಟಿ ಹತ್ತಿರ ನಿರ್ಮಿಸಿರುವ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಭಕ್ತರೆಲ್ಲಾ ಸೇರಿ ನಿರ್ಮಿಸಿದ್ದೇವೆ, ಸರ್ಕಾರದಿಂದ ಯಾವುದೇ ಅನುದಾನವಿಲ್ಲ, ಎಸ್. ವಿ. ರಾಮಚಂದ್ರಪ್ಪನವರು ಐದು ಲಕ್ಷ ಹಣ ನೀಡಿದ್ದಾರೆ. ಈ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಶೌಚಾಲಯ ವ್ಯವಸ್ಥೆಯಿಲ್ಲ, ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಶೌಚಾಲಯ ನಿರ್ಮಿಸಿ ಕೊಡಬೇಕು, ಮುಜರಾಯಿ ಇಲಾಖೆಯಿಂದ ಯಾವುದೇ ಹಣ ಬಿಡುಗಡೆ ಆಗಿಲ್ಲ, ಹಣ ಇದ್ದರೂ ಖರ್ಚು ಮಾಡುತ್ತಿಲ್ಲ ಎಂದು ದೂರಿದರು.

ಈ ದಿನ ಬೆಳಗ್ಗೆ ರೇಣುಕಾ ದೇವಿಗೆ ಯಜ್ಞ ಯಾಗಾದಿ ಕಾರ್ಯಕ್ರಮ, ಮೂರ್ತಿಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ ಕಾರ್ಯಕ್ರಮಗಳು ನಡೆದವು. ಈ ಸಂದರ್ಭದಲ್ಲಿ ಶಾಸಕ ದೇವೇಂದ್ರಪ್ಪ ನವರ ಪುತ್ರ ಕೀರ್ತಿರಾಜ್, ಶಿವಕುಮಾರ್ ಸ್ವಾಮಿ, ನಿವೃತ್ತ ಶಿಕ್ಷಕರಾದ ಅಂಜಿನಪ್ಪ, ಈರಣ್ಣ, ಮುಖಂಡರಾದ ಬೇವಿನಹಳ್ಳಿ ಕೆಂಚನಗೌಡ, ಮಂಜುನಾಥ್ ಗೌಡ, ಅಜ್ಮತ್ ಉಲ್ಲಾ ಸಾಹೇಬ್, ರವಿಗೌಡ್ರು, ಎನ್. ಸಿ. ಸಿದ್ದನಗೌಡ್ರು, ರಫಿಕ್ ಸಾಹೇಬ್, ಮಂಜುನಾಥ್, ಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು, ವಿಎಸ್ಎನ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು, ರೇಣುಕಾ ದೇವಿ ಜೀರ್ಣೋದ್ದಾರ ಸೇವಾ ಸಮಿತಿ ಸರ್ವ ಸದಸ್ಯರು ಹಾಗೂ ಊರಿನ ಮುಖಂಡರು ಹಾಜರಿದ್ದರು.

# ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ, ರಾಗಿ, ಜೋಳ ಬೆಳೆ ನೊಂದಣಿ ಖರೀದಿ ಪ್ರಕ್ರಿಯೆ

**ಹಂಪಿ ಟೈಮ್ಸ್ ಬಳ್ಳಾರಿ**

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ 2023-24ನೇ ಸಾಲಿನಲ್ಲಿ ಭತ್ತ, ರಾಗಿ, ಜೋಳ ಬೆಳೆಗಳನ್ನು ರೈತರಿಂದ ನೇರವಾಗಿ ಖರೀದಿಸಲು ಡಿ.01ರಿಂದ ರೈತರ ನೊಂದಣಿ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ರೈತರ ನೊಂದಣಿ ಪ್ರಕ್ರಿಯೆಯು ರಾಗಿ ಮತ್ತು ಜೋಳ ಬೆಳೆಗಳಿಗೆ ಡಿ.01ರಿಂದ ನಡೆಯಲಿದ್ದು, ಭತ್ತ ಬೆಳೆಗೆ ಈಗಾಗಲೇ ಆರಂಭವಾಗಿದೆ ಹಾಗೂ ಕೃಷಿ ಉತ್ಪನ್ನಗಳ ಖರೀದಿ ಪ್ರಕ್ರಿಯೆಯು 2024ನೇ ಜನವರಿ 1ರಿಂದ 2024ನೇ ಮಾರ್ಚ್ 31ರವರೆಗೆ ನಡೆಯಲಿದೆ.

ಕೃಷಿ ಉತ್ಪನ್ನಗಳಾದ ಸಾಮಾನ್ಯ ಭತ್ತಕ್ಕೆ (ಪ್ರತಿ ಕ್ವಿಂಟಲ್‌ಗೆ) ರೂ.2183, ಗ್ರೇಡ್ ಎ-ಭತ್ತಕ್ಕೆ ರೂ.2203, ರಾಗಿಗೆ ರೂ.3846, ಹೈಬ್ರೀಡ್-ಬಿಳಿ ಜೋಳಕ್ಕೆ ರೂ.3180, ಮಾಲ್ದಂಡಿ-ಬಿಳಿ ಜೋಳಕ್ಕೆ ರೂ.3225 ಕನಿಷ್ಠ ಬೆಂಬಲ ಬೆಲೆಗಳಾಗಿವೆ.

ಬೆಂಬಲ ಬೆಲೆ ಯೋಜನೆಯಡಿ ಕೃಷಿ ಉತ್ಪನ್ನವನ್ನು ಮಾರಾಟ ಮಾಡಲು ರೈತರು ಮೊದಲು ಕೃಷಿ ಇಲಾಖೆಯಲ್ಲಿ ಫ್ರೂಟ್ಸ್ ತಂತ್ರಾಂಶದಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಆಯಾ ತಾಲ್ಲೂಕುಗಳ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ, ತಾಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ತಾಲೂಕು ಕೇಂದ್ರ ಕಚೇರಿಗಳಲ್ಲಿ ತೆರೆಯಲಾಗುವ ಖರೀದಿ ಕೇಂದ್ರಗಳಲ್ಲಿ ಭತ್ತ, ರಾಗಿ, ಜೋಳ ಮಾರಾಟ ಮಾಡಲು ನೊಂದಾಯಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

**ನೊಂದಣಿ ಮತ್ತು ಖರೀದಿ ಕೇಂದ್ರಗಳ ವಿವರ:**

ಬಳ್ಳಾರಿಯ ತಾಲ್ಲೂಕಿನ ಎಪಿಎಂಸಿ ಯಾರ್ಡ್, ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘ ಹಾಗೂ ಎಸ್‌ಡಬ್ಲ್ಯೂಸಿ ಗೋದಾಮು-01 ಮತ್ತು 02. ಕುರುಗೋಡು ತಾಲ್ಲೂಕಿನ ಎಪಿಎಂಸಿ ಯಾರ್ಡ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ. ಸಿರುಗುಪ್ಪ ತಾಲ್ಲೂಕಿನ ಎಪಿಎಂಸಿ ಯಾರ್ಡ್, ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘ. ಸಂಡೂರು ತಾಲ್ಲೂಕಿನ ಎಪಿಎಂಸಿ ಯಾರ್ಡ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಕಂಪ್ಲಿ ತಾಲ್ಲೂಕಿನ ಎಪಿಎಂಸಿ ಯಾರ್ಡ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನೊಂದಣಿ ಮತ್ತು ಖರೀದಿ ಕೇಂದ್ರಗಳಾಗಿವೆ.

**ಖರೀದಿ ಅಧಿಕಾರಿಗಳು ಮತ್ತು ಗ್ರೇಡರ್‌ಗಳು:**

ಬಳ್ಳಾರಿಯ ತಾಲ್ಲೂಕಿನ ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘದ ನರಸಿಂಹ ಅವರ ಮೊ.900677875 ಹಾಗೂ ಬಳ್ಳಾರಿ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಸುಷ್ಮಾ ಅವರ ಮೊ.8277930412, ಕುರುಗೋಡಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಹುಸೇನ್ ಸಾಬ್ ಅವರ ಮೊ.8951307333 ಹಾಗೂ ಸಹಾಯಕ ತೋಟಗಾರಿಕೆ ಅಧಿಕಾರಿ ರಾಘವೇಂದ್ರ ಅವರ ಮೊ.9740775129.

ಸಿರುಗುಪ್ಪ ತಾಲ್ಲೂಕಿನ ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘದ ಅಧ್ಯಕ್ಷ ಮೋಹನ್‌ಗೌಡ ಅವರ ಮೊ.9731421918 ಹಾಗೂ ತೆಕ್ಕಲಕೋಟೆಯ ಕೃಷಿ ಅಧಿಕಾರಿ ಹೇಮಲ ನಾಯಕ್ ಅವರ ಮೊ.9902751026, ಸಂಡೂರಿನ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಶಿವಲಿಂಗಪ್ಪ ಅವರ ಮೊ.9980676497 ಹಾಗೂ ಕೃಷಿ ಅಧಿಕಾರಿ ರಾಘವೇಂದ್ರ ಅವರ ಮೊ.8277930434, ಕಂಪ್ಲಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ರಂಗಪ್ಪ ಮೊ.9740838910, ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕೃಷಿ ಅಧಿಕಾರಿ ಶಿವಪ್ಪ ಬಾರಿಗಿಡದ ಮಡಿವಾಳರ ಎ.ಎಸ್.ಅವರ ಮೊ.9611949460 ಅವರನ್ನು ಸಂಪರ್ಕಿಬಹುದಾಗಿದೆ.

**ಸೂಚನೆಗಳು:** ಎಲ್ಲಾ ಹೋಬಳಿ ಮಟ್ಟದ ಖರೀದಿ ಕೇಂದ್ರಗಳಲ್ಲಿ ಆನ್‌ಲೈನ್ ಮುಖಾಂತರ ರೈತರ ನೊಂದಣಿಯನ್ನು ಮಾಡಲಾಗುವುದು. ಖರೀದಿ ಕೇಂದ್ರಕ್ಕೆ ರೈತರು ಕೃಷಿ ಇಲಾಖೆಯಿಂದ ಪಡೆದಿರುವ ಅವರ ಫ್ರೂಟ್ಸ್ ಐ.ಡಿ. (ರೈತರ ನೊಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆ (Farmer Registration and Unified Beneficiary Information System-FRUITS) ಮತ್ತು ಆಧಾರ್‌ನೊಂದಿಗೆ ನೊಂದಣಿ ಕೇಂದ್ರಕ್ಕೆ ಬರಬೇಕು. ಬೆಂಬಲ ಬೆಲೆಗಾಗಿ ರೈತರನ್ನು ಪ್ರತ್ಯೇಕವಾಗಿ ನೊಂದಾಯಿಸದೇ ಕೇವಲ ಅವರ ಫ್ರೂಟ್ಸ್ ಐ.ಡಿ.ಯ ಮೂಲಕ ಖರೀದಿಗೆ ನೊಂದಾಯಿಸಲಾಗುತ್ತದೆ.

ರೈತರ ಫ್ರೂಟ್ಸ್ ಐ.ಡಿ ಯನ್ನು ಪ್ರಸ್ತಕ ಸಾಲಿನಲ್ಲಿ ರೈತರಿಂದ ಫ್ರೂಟ್ಸ್ ಐ.ಡಿ ಪಡೆಯುವುದು ಕಡ್ಡಾಯ. ರೈತರ ಬಳಿ ಫ್ರೂಟ್ಸ್ ಐ.ಡಿ ಇಲ್ಲದಿದ್ದಲ್ಲಿ ಅಥವಾ ಅವರ ಫ್ರೂಟ್ಸ್ ಐ.ಡಿ ಮಾಹಿತಿ ಪರಿಷ್ಕರಿಸಲು ಕೃಷಿ ಇಲಾಖೆಯನ್ನು ಸಂಪರ್ಕಿಸಿ ಸರಿಪಡಿಸಿಕೊಳ್ಳಬೇಕು.

ಪ್ರತಿಯೊಬ್ಬ ರೈತರ ಫ್ರೂಟ್ಸ್ ಐ.ಡಿ. ನಮೂದಿಸಿದ ನಂತರ ಫ್ರೂಟ್ಸ್ ದತ್ತಾಂಶದಿಂದ ರೈತರ ಅಗತ್ಯ ಮಾಹಿತಿ ಲಭ್ಯವಾಗಲಿದೆ. ಮಾಹಿತಿಯಲ್ಲಿ ರೈತರ ಹೆಸರು, ವಿಳಾಸ, ಜಾತಿ, ವಯಸ್ಸು, ಮೊಬೈಲ್ ಸಂಖ್ಯೆ, ಜಮೀನು ಮತ್ತು ಬೆಳೆದಿರುವ ಬೆಳೆಯ ವಿವರಗಳು ಹಾಗೂ ರೈತರ ಬ್ಯಾಂಕ್ ಖಾತೆಯ ವಿವರಗಳು ಲಭ್ಯವಿರುತ್ತವೆ. ಹಾಗಾಗಿ ಪ್ರತ್ಯೇಕವಾಗಿ ಬೇರೆ ಯಾವುದೇ ದಾಖಲೆ ನೀಡುವ ಅವಶ್ಯಕತೆ ಇರುವುದಿಲ್ಲ. ಫ್ರೂಟ್ಸ್ ದತ್ತಾಂಶದನ್ವಯ ರೈತರ ಬೆಳೆ ಸಮೀಕ್ಷೆ ವಿವರದಂತೆ ಬೆಳೆ ವಿಸ್ತೀರ್ಣಕ್ಕನುಗುಣವಾಗಿ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಬಹುದಾದ ಗರಿಷ್ಠ ಪ್ರಮಾಣವನ್ನು ತೋರಿಸಲಾಗುವುದು.

ಖರೀದಿ ಕೇಂದ್ರಗಳಲ್ಲಿ ನೊಂದಣಿ ಮಾಡಿದಾಗ ರೈತರಿಗೆ ತಮ್ಮ ಜಮೀನು ಮತ್ತು ಬೆಳೆ ವಿವರ ನೋಡಲು ಅವಕಾಶವಿದೆ. ರೈತರು ಖರೀದಿ ವಿವರಗಳನ್ನು ಒಪ್ಪಿ ನಮೂದಿಸಿದ ನಂತರ ಸ್ವೀಕೃತಿಯನ್ನು ಮುದ್ರಿಸಿ ರೈತರರಿಗೆ ನೀಡಲಾಗುವುದು. ರೈತರು ಭತ್ತ, ರಾಗಿ, ಜೋಳ ಸರಬರಾಜು ಮಾಡುವಾಗ ಎಫ್.ಎ.ಕ್ಯೂ ಗುಣಮಟ್ಟವನ್ನು ಪರಿಶೀಲಿಸಿ ಖರೀದಿಸಲಾಗುವುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

**ಹಣಪಾವತಿ:**

ಬೆಂಬಲ ಬೆಲೆ ಯೋಜನೆಯಡಿ ಭತ್ತ, ರಾಗಿ, ಜೋಳ ಸರಬರಾಜು ಮಾಡಿದ ರೈತರಿಗೆ ಅವರು ಕೃಷಿ ಇಲಾಖೆಯಲ್ಲಿ ನೊಂದಾಯಿಸಿಕೊಂಡಿರುವ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ ಹಣ ಪಾವತಿಸಲಾಗುವುದು. ಮಧ್ಯವರ್ತಿಗಳು, ಏಜೆಂಟರ್‌ಗಳು ಖರೀದಿ ಕೇಂದ್ರಗಳಿಗೆ ಭತ್ತವನ್ನು ತಂದಲ್ಲಿ ಅಂತಹವರ ವಿರುದ್ದ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಜಿಲ್ಲಾಧಿಕಾರಿ ಅವರು ಎಚ್ಚರಿಸಿದ್ದಾರೆ. ಬೆಂಬಲ ಬೆಲೆ ಯೋಜನೆ ಬಗ್ಗೆ ರೈತರಿಗೆ ಯಾವುದೇ ಸಮಸ್ಯೆಗಳಿದ್ದರೆ ತಾಲ್ಲೂಕಿನ ತಹಶೀಲ್ದಾರ್, ಕೃಷಿ ಅಧಿಕಾರಿ, ಎ.ಪಿ.ಎಂ.ಸಿ ಕಾರ್ಯದರ್ಶಿ, ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಪ್ರಧಾನ ಕಾರ್ಯದರ್ಶಿ ಜಿ.ಕೆ.ವೆಂಕಟೇಶ ಅವರ ಮೊ.9036484002 ಹಾಗೂ ಸಹಾಯಕ ಕಾರ್ಯದರ್ಶಿ ಡಿ.ಎಂ. ಆಶಿಕ್ ಆಲಿ ಅವರ ಮೊ.9686935278 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

# ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2023-24ನೇ ಸಾಲಿಗೆ ಪರಿಶಿಷ್ಟ ಜಾತಿಯ ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ತಲಾ ಓರ್ವ ಪತ್ರಿಕೋದ್ಯಮ ಪದವೀಧರರಿಗೆ ವಿಜಯನಗರ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿರಿಯ ಸಹಾಯಕ ನಿರ್ದೇಶಕ ಧನಂಜಯ ಬಿ. ಅವರು ತಿಳಿಸಿದ್ದಾರೆ.

ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದು, ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು. ಮೆರಿಟ್ ಹಾಗೂ ಸಂದರ್ಶನದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ತರಬೇತಿಯ ಅವಧಿ ವೇಳೆ ಮಾಹೆಯಾನ 15,000 ರೂ.ಗಳ ಸ್ಟೈಫಂಡ್ ನೀಡಲಾಗುವುದು. ಈ ತರಬೇತಿಯು 2024 ರ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ 12 ತಿಂಗಳ ಅಪ್ರೆಂಟಿಸ್ ತರಬೇತಿಯಾಗಿದ್ದು, ಇದು ತಾತ್ಕಾಲಿಕವಾಗಿರುತ್ತದೆ.

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು. ಅರ್ಜಿ ಸಲ್ಲಿಸಲು ಡಿಸೆಂಬರ್11 ಕೊನೆಯ ದಿನವಾಗಿದೆ. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಆಯ್ಕೆಯಾದ ಅಭ್ಯರ್ಥಿಗಳು ಸಂದರ್ಶನದ ವೇಳೆ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಮೂಲ ದಾಖಲಾತಿಗಳನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅಭ್ಯರ್ಥಿಗಳು ಸ್ನಾತಕೋತ್ತರ ಅಂತಿಮ ವರ್ಷದ ಪದವಿಯ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು. ಅಂಕಪಟ್ಟಿಯನ್ನು ನಿರೀಕ್ಷಿಸಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ತರಬೇತಿಯ ಅವಧಿಯಲ್ಲಿ ಬೇರೆ ಉದ್ಯೋಗ ಮಾಡಬಾರದು. ತರಬೇತಿಯ ಅವಧಿಯ ಮಧ್ಯದಲ್ಲಿ ಬಿಟ್ಟು ಹೋದರೆ, ಮೂಲ ದಾಖಲಾತಿಗಳನ್ನು ಅವಧಿಗೆ ಮುನ್ನ ಹಿಂದುರುಗಿಸುವುದಿಲ್ಲ. ಸರ್ಕಾರಿ ಖಾಸಗಿ ಸಂಸ್ಥೆಯಲ್ಲಿ ಖಾಯಂ ಉದ್ಯೋಗ ಸಿಕ್ಕಿದಲ್ಲಿ ಷರತ್ತಿಗೊಳಪಟ್ಟು ಮೂಲ ದಾಖಲಾತಿಗಳನ್ನು ಹಿಂದಿರುಗಿಸಲಾಗುವುದು. ಒಮ್ಮೆ ಫಲಾನುಭವಿಯಾದವರನ್ನು ಈ ಯೋಜನೆಯಡಿ ಮತ್ತೊಂದು ಅವಧಿಗೆ ಆಯ್ಕೆ ಮಾಡಲು ಅವಕಾಶವಿರುವುದಿಲ್ಲ ಹಾಗೂ ಸುಳ್ಳು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು. ಈ ಮೇಲ್ಕಂಡ ಷರತ್ತುಗಳನ್ನು ಪಾಲಿಸುವುದಾಗಿ ಆಯ್ಕೆಯಾದ ಅಭ್ಯರ್ಥಿಗಳು 20 ರೂ.ಗಳ ಛಾಪಾ ಕಾಗದದಲ್ಲಿ ಲಿಖಿತ ಹೇಳಿಕೆ ನೀಡಬೇಕು. ಆಸಕ್ತರು ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ತಾಲ್ಲೂಕು ಕಚೇರಿ ಆವರಣ ಇಲ್ಲಿ ಸಂಪರ್ಕಿಸಬಹುದಾಗಿದೆ.

**ಇ-ಪೇಪರ್ ಉಚಿತ**

ಇಂದೇ ಹಂಪಿ ಟೈಮ್ಸ್ ವಾಟ್ಸ್‌ಪ್ ಚಾನಲ್ ಸೇರಿ, ಇ-ಪೇಪರ್ ಉಚಿತವಾಗಿ ಪಡೆಯಿರಿ







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA